Strike by Assistant Commissioners.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ಇಷ್ಟೆಲ್ಲಾ ಹೇಳಿಕೆಗಳನ್ನು ಇವರು ಕೊಡುತ್ತಾರೆ. ಆದರೆ ನಾನು ಕಂದಾಯ ಇಲಾಖೆಯ ನೌಕರರ ಬಗ್ಗೆ ಒಂದು ಮಾತನ್ನು ಕೇಳಬೇಕಾಗಿದೆ. ಆ ಇಲಾಖೆಯ ನೌಕರರು ಆಲ್ಲಿ ಚಳವಳಿಯನ್ನು ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯದಾದ್ಯಂತ ಅಸಿಸ್ಟೆಂಟ್ ಕಮಿಷನರ್‌ಗಳು ಚಳವಳಿ ಮಾಡುತ್ತಿದ್ದಾರೆ. ಇದರ ಬಗ್ಗೆ ಕೂಡ ಒಂದು ಮಾತನ್ನು ಮಾನ್ಯ ಸಚಿವರು ಹೇಳಬೇಕು, ಇಲ್ಲದಿದ್ದರೆ ಆ ನೌಕರರ ಹತ್ತಿರ ಇವರು ಮಾತನಾಡಬೇಕು. ಇದರಲ್ಲಿ ಯಾವುದನ್ನೂ ಮಾಡದೇ ಹೋದರೆ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತದೆ.....

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ, ನಾನು ಹೇಳುವುದನ್ನು ಕೇಳಿ, ಈಗ ಮಾನ ಸಚಿವರು ಹೇಳಿಕೆಯನ್ನು ಕೊಡುತ್ತಾರೆ.

ಅಭಾವ ಪರಿಸ್ಥಿತಿಯ ಬಗ್ಗೆ ಸಚಿವರಿಂದ ಹೇಳಿಕೆ

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—ಕರ್ನಾಟಕ ರಾಜ್ಯದಲ್ಲಿ ದುರಾದೃಷ್ಟವಶಾತ್ ನಿರಂತರವಾಗಿ ನಾಲ್ಕನೇ ವರ್ಷವು ಕೂಡಾ ಹಿಂದೆಂದೂ ನೋಡಿರಲಿಲ್ಲವೆನ್ನಲಾದ ಅಭಾವ ಪರಿಸ್ಥಿತಿಯು ರಾಜ್ಯದ ೧೯ ಜಿಲ್ಲೆಗಳಲ್ಲಿ ೧೮ ಜಿಲ್ಲೆಗಳ ೧೯೮ ತಾಲ್ಲೂಕುಗಳಿಗೂ ೧೯೭೫ ಗ್ರಾಮಗಳನ್ನು ಆವರಿಸಿಕೊಂಡಿದೆ. ೨೧೧.೬೨ ಲಕ್ಷ ಜನರು ಮತ್ತು ೧೦೭.೫೯ ಲಕ್ಷ ಜಾನುವಾರಗಳು ತೊಂದರೆಗೊಳಗಾಗಿವೆ. ೧೬.೧೩ ಲಕ್ಷ ಸಣ್ಣ ಮತ್ತು ಅತಿ ಸಣ್ಣ ರೈತರು ಹಾಗೂ ೨೩.೨೪ ಲಕ್ಷ ಕೃಷಿ ಕಾರ್ಮಿಕರು ತೊಂದರೆಗೊಳಗಾಗಿದ್ದಾರೆ. ಮುಂಗಾರು ಬೆಳೆ ಪ್ರದೇಶದ ಶೇಕಡ ೪೬ ಭಾಗಷ್ಟು ಮತ್ತು ಹಿಂಗಾರು ಬೆಳೆ ಪ್ರದೇಶದ ಶೇಕಡಾ ೬೬ರಷ್ಟು ಬೆಳೆಗಳು ತೊಂದರೆಗೊಳಗಾಗಿದೆ. ಪ್ರಸಕ್ತ ವರ್ಷ ಆಹಾರ ಧಾನ್ಯಗಳ ಉತ್ಪಾದನೆಯು ಒಟ್ಟು ನಷ್ಟ ಶೇಕಡಾ ೫೦ರಷ್ಟಾಗಿದೆ.

ಇಂತಹ ಗಂಭೀರ ಅಭಾವ ಪರಿಸ್ಥಿತಿಯು ರಾಜ್ಯದಲ್ಲಿ ತಲೆದೋರಿರುವ ಹಿನ್ನೆಲೆಯಲ್ಲಿ ರಾಜ್ಯದ ಅಭಾವ ಪೀಡಿತ ಪ್ರದೇಶಗಳಲ್ಲಿ ಸಾಕಷ್ಟು ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ಪ್ರಸಕ್ತ ವರ್ಷದಲ್ಲಿ ರಾಜ್ಯ ಸರ್ಕಾರವು ಕೇಂದ್ರ ಸಹಾಯ ಧನಕ್ಕಾಗಿ ಸಾಲಾರು ಜ್ಞಾಪನಾ ಪತ್ರಗಳನ್ನು ಸಲ್ಲಿಸಿದೆ. ಮೊದಲನೆಯ ಜ್ಞಾಪನಾ ಪತ್ರದಲ್ಲಿ ಕೇಳಿದ ಒಟ್ಟು ೮೯ ಕೋಟಿ ರೂಪಾಯಿಗಳಿಗೆ ಎದುರಾಗಿ ೧೯೮೫ರ ಜೂನ್‌ಗೆ ಅಂತ್ಯಗೊಳ್ಳುವಂತೆ ೨೨.೧೬ ಕೋಟಿ ರೂಪಾಯಿಗಳ ಕೇಂದ್ರ ನೆರವಿನ ಮಿತಿಯನ್ನು ನೀಡಿದೆ. ಅನಂತರ ಅದನ್ನು ೧೯೮೫ರ ಜುಲೈವರೆಗೆ ವಿಸ್ತರಿಸಿತು. ಈ ಹಣದ ಜೊತೆಗೆ ಇದೇ ಅವಧಿಗೆ ಬೆಳೆಗಳ ಸಾಲದ ರಿ ಷೆಡ್ಯೂಲ್‌ಗಾಗಿ ೧.೭೨ ಕೋಟಿ ರೂಪಾಯಿಗಳ ಸಹಾಯವನ್ನು ನೀಡಿದೆ. ೧೯೮೫ರಲ್ಲಿ ಮುಂಗಾರು ಮಳೆಯ ವಿಫಲತೆಯಿಂದ ಹಾಗೂ ತದನಂತರದ ಮುಂಗಾರು ಬೆಳೆಯ ವಿಫಲತೆಯಿಂದ ಬರಗಾಲ ಪರಿಸ್ಥಿತಿಯು ಮುಂದುವರೆದಾಗ, ೧೯೮೫ರ ಆಗಸ್ಟ್ ತಿಂಗಳಲ್ಲಿ ೧೫೫ ಕೋಟಿ ರೂಪಾಯಿಗಳ ಹೆಚ್ಚುವರಿ ಕೇಂದ್ರ ಧನಸಹಾಯವನ್ನು ಕೋರಿ ಎರಡನೇ ಜ್ಞಾಪನಾ ಪತ್ರವನ್ನು ಕೇಂದ್ರಕ್ಕೆ ಸಲ್ಲಿಸಲಾಯಿತು. ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಸಾಗಾಣಿಕೆಗಾಗಿ ೧.೨೫ ಕೋಟಿ ರೂಪಾಯಿಗಳ ಮಿತಿಯನ್ನು ೧೯೮೫ರ ಅಕ್ಟೋಬರ್‌ಗೆ ಅಂತ್ಯಗೊಳ್ಳುವುದನ್ನು ಬಿಟ್ಟು, ೧೯೮೬ರ ಮಾರ್ಚಿಗೆ ಅಂತ್ಯಗೊಳ್ಳುವ ಹಾಗೆ ಕೇಂದ್ರ ಸರ್ಕಾರವು ೩೧.೧೫ ಕೋಟಿ ರೂಪಾಯಿಗಳ ಹೆಚ್ಚಿನ ನೆರವಿನ ಮಿತಿಯನ್ನು ಒಪ್ಪಿತು.

ಈಶಾನ್ಯ ಮಾನ್‌ಸೂನ್ ಮಳೆಯ ವಿಫಲತೆಯಿಂದ ರಾಜ್ಯದಲ್ಲಿ ಅಭಾವ ಪರಿಸ್ಥಿತಿಯು ಇನ್ನಷ್ಟು ಉಲ್ಬಣಗೊಂಡು, ಮೂಲಭೂತ ಅವಶ್ಯಕತೆಗಳಾದ ಉದ್ಯೋಗ, ಕುಡಿಯುವ ನೀರು ಮತ್ತು ಮೇವುಗಳನ್ನು ಒದಗಿಸುವಂತಹ ಹೆಚ್ಚಿನ ಪರಿಣಾಮಕಾರಿ ಹಾಗೂ ವ್ಯಾಪಕ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅವಶ್ಯವಾಯಿತು. ಕರಾವಳಿ ಪ್ರದೇಶ ಮತ್ತು ಮಲೆನಾಡು ಪ್ರದೇಶಗಳ ಹಲವು ತಾಲ್ಲೂಕುಗಳನ್ನು ಬಿಟ್ಟು ರಾಜ್ಯದ ಎಲ್ಲಾ ಪ್ರದೇಶದಲ್ಲಿ ಹೆಚ್ಚಿನ ವೆಚ್ಚದ ವಿಶೇಷ ಅವಶ್ಯಕತೆಯಲ್ಲಿ ಮುಂದಿನ ಮುಂಗಾರು ಮಳೆ ಬೀಳುವವರೆಗೆ ಅಂದರೆ ೧೯೮೬ರ ಜೂನ್ ಅಂತ್ಯದವರೆಗೆ ಮುಂದುವರೆಯುವ ಹಾಗೆ ಹೆಚ್ಚಿನ ವ್ಯಾಪಕ ಪರಿಹಾರ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರವು ಪ್ರಾರಂಭಿಸಬೇಕಾಯಿತು. ನೀಲಿ ಹೆಳಿದ ಕಾರಣಗಳಿಂದಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ೨೭೧.೦೦ ಕೋಟಿ ರೂಪಾಯಿಗಳ ಹೆಚ್ಚಿನ ಕೇಂದ್ರ ಸಹಾಯಕ್ಕಾಗಿ ಮೂರನೇ ಜ್ಞಾಪನಪತ್ರವನ್ನು ೧೯೮೫ರ ಡಿಸೆಂಬರ್‌ನಲ್ಲಿ ಸಲ್ಲಿಸುವುದು ಅನಿವಾರ್ಯವಾಯಿತು.

ಮೇಲೆ ಹೇಳಿದ ಜ್ಞಾಪನಾ ಪತ್ರಕ್ಕೆ ನಿಧಾನವಾದರೂ, ಪ್ರತಿಕ್ರಿಯಿಸಿ, ಕೇಂದ್ರ ಸರ್ಕಾರವು ಕೃಷಿ ಸಚಿವಾಲಯದ ಅಪರ ಕಾರ್ಯದರ್ಶಿ ಮತ್ತು ಪರಿಹಾರ ಆಯುಕ್ತರಾದ ಶ್ರೀ ಬಿ.ಎಸ್. ಸರಾಫ್ ಅವರ ನೇತೃತ್ವದಲ್ಲಿ ಅಧ್ಯಯನ ತಂಡವನ್ನು ಕಳುಹಿಸಿತು. ಅಧ್ಯಯನ ತಂಡವು ರಾಜ್ಯಕ್ಕೆ ೧೯೮೬ರ ಫೆಬ್ರುವರಿ ೭ರಿಂದ ೨೪ರವರೆಗೆ ಭೇಟಿ ನೀಡಿತು. ಬರಗಾಲ ಪರಿಸ್ಥಿತಿಯ ಸ್ಥಳ ಅಧ್ಯಯನಕ್ಕಾಗಿ ಅಭಾವ ಪೀಡಿತ ಪ್ರದೇಶಗಳನ್ನು ವ್ಯಾಪಕವಾಗಿ ಸಂಚರಿಸಿತು. ಮತ್ತು ರಾಜ್ಯ ಸರ್ಕಾರದ ಜೊತೆಯಲ್ಲಿ ಮತ್ತು ರಾಜ್ಯದ ವಿರೋಧ ಪಕ್ಷದ ನಾಯಕರೊಡನೆ ಚರ್ಚೆಯನ್ನು ನಡೆಸಿತು.

ರಾಜ್ಯ ಸರ್ಕಾರವು ೧೯೮೫ರ ಡಿಸೆಂಬರ್‌ನಲ್ಲಿ ಸಲ್ಲಿಸಿದ ಜ್ಞಾಪನ ಪತ್ರದ ನಂತರ ಮೂರು ತಿಂಗಳು ಸಂದಿದೆ. ಈ ಅವಧಿಯಲ್ಲಿ ರಾಜ್ಯದಲ್ಲಿ ವಿಷಮಗೊಂಡಿರುವ ಅಭಾವ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ತನ್ನ ಬೊಕ್ಕಸದಿಂದಲೇ ಹೆಚ್ಚು ಹಣ ಖರ್ಚು ಮಾಡಿ ಸಾಕಷ್ಟು ಉದ್ಯೋಗ, ಕುಡಿಯುವ ನೀರು ಮತ್ತು ಜಾನುವಾರುಗಳಿಗೆ ಮೇವುಗಳನ್ನೊಳಗೊಂಡ ತುರ್ತು ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಯಿತು. ರಾಜ್ಯಮಟ್ಟದಲ್ಲಿ ಕೇಂದ್ರ ಅಧ್ಯಯನ ತಂಡದೊಂದಿಗೆ ನಡೆಸಿದ ಚರ್ಚೆಯಿಂದಾಗಿ ರಾಜ್ಯ ಸರ್ಕಾರವು ಕೆಲವು ಹೆಚ್ಚಿನ ವಿಷಯಗಳಿಗಾಗಿ ೭೭ ಕೋಟಿ ರೂಪಾಯಿಗಳನ್ನು ಕೋರಲಾಗಿದ್ದರಿಂದ ಒಟ್ಟು ಕೋರಲಾದ ಕೇಂದ್ರ ಸಹಾಯವು ೩೪೮ ಕೋಟಿಗಳಾಯಿತು. ಎಂಟನೆ ಹಣಕಾಸು ಆಯೋಗದ ತೀರ್ಪಿನಂತೆ ಅಪರೂಪದ ತೀವ್ರತೆಯ ನೈಸರ್ಗಿಕ ವಿಕೋಪದ ಸಂದರ್ಭದಲ್ಲಿ ನಿಗದಿಪಡಿಸಿರುವ ವಿಧಾನ ಗಳನ್ನು ಸಡಿಲಗೊಳಿಸಿ ಈಗ ಕೋರಿರುವ ಹೆಚ್ಚಿನ ಕೇಂದ್ರ ಸಹಾಯವನ್ನು ಪೂರ್ಣ ಅನುದಾನವಾಗಿ ಕೊಡಲು ಒತ್ತಾಯಿಸಲಾಗಿದೆ.

೧.೬) ಕೇಂದ್ರ ಸರ್ಕಾರವು ೧೯೮೫-೮೬ರ ಹಣಕಾಸಿನ ವರ್ಷಕ್ಕೆ ನಿಗಧಿಪಡಿಸಿದ ೫೩೩.೩೧ ಕೋಟಿ ರೂಪಾಯಿಗಳ ಕೇಂದ್ರ ಸಹಾಯಕ್ಕೆ ಎದುರಾಗಿ ರಾಜ್ಯ ಸರ್ಕಾರವು ಈಗಾಗಲೇ ೮೮.೪೪ ಕೋಟಿ ರೂಪಾಯಿಗಳನ್ನು ಅಭಾವ ಪರಿಹಾರ ಕಾಮಗಾರಿಗಳಿಗಾಗಿ ಬಿಡುಗಡೆ ಮಾಡಿದ್ದು, ಕೇಂದ್ರ ಸಹಾಯದ ಮಿತಿಗಿಂತ (ಸೀಲಿಂಗ್) ೨೫೫ ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಿದಂತಾಗಿದೆ. ಹೀಗೆ ಬಿಡುಗಡೆ ಮಾಡಿದ ಹಣದಲ್ಲಿ. ಸಂಬಂಧಪಟ್ಟ ಇಲಾಖೆಗಳ ಮತ್ತು ಜಿಲ್ಲೆಗಳಿಂದ ಬಂದಿರುವ ಪರಿದಿ ಗಳಂತೆ ೨೮-೨-೮೬ರ ಹೊತ್ತಿಗೆ ೬೪.೩೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಕೇಂದ್ರ ಸರ್ಕಾರದಿಂದ ಮಿತಿಗೊಳಿಸಿ ಬಿಡುಗಡೆ ಮಾಡಿದ ಹಣ, ಇದಕ್ಕೆ ಎದುರಾಗಿ ರಾಜ್ಯ ಸರ್ಕಾರವು ಬಿಡುಗಡೆ ಮಾಡಿರುವ ಹಣ ಮತ್ತು ಕೇಂದ್ರವು ನಿಗದಿಪಡಿಸಿರುವ ನೊತ್ತಕ್ಕೆ ಎದುರಾಗಿ ಖರ್ಚಾದ ಹಣ ಇವುಗಳ ವಿವರವನ್ನು ಸ್ಥೂಲವಾಗಿ ಅನುಬಂಧ-'I'ರಲ್ಲಿ ಒದಗಿಸಲಾಗಿದೆ. ಅಲ್ಲದೆ ಜಿಲ್ಲಾವಾರು ಹಣ ಬಿಡುಗಡೆ ಮತ್ತು ಖರ್ಚಾದ ಹಣದ ವಿವರವನ್ನು ಕೂಡ ಅನುಬಂಧ II ಮತ್ತು IIIರಲ್ಲಿ ಒದಗಿಸಲಾಗಿದೆ.

೧.೭) ಹಣ ಖರ್ಚು ಮಾಡಿದ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ವೆಚ್ಚಗಳ ತಃಖ್ತೆ ಯೆನ್ನು ಸಮಯಕ್ಕೆ ಸರಿಯಾಗಿ ಒದಗಿಸಿಕೊಟ್ಟಿದೆ. ಜನವರಿ ತಿಂಗಳ ಅಂತ್ಯದ ಹೊತ್ತಿಗೆ ರಾಜ್ಯ ಸರ್ಕಾರ ಖರ್ಚು ಮಾಡಿದ ಹಣದ ವಿವರಗಳ ತಃಖ್ತೆಯನ್ನು ಇತ್ತೀಚೆಗೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರವು ಅರೆ ಸರ್ಕಾರಿ ಪತ್ರ ಸಂಖ್ಯೆ ಎಫ್‌ಡಿ ೭೫ ಬಿಬಿಎಲ್ ೮೫ ದಿನಾಂಕ ೧೨-೩-೮೬ರ ಮೂಲಕ ಶ್ರೀ ವಿ. ಸ್ವಾಮಿನಾಥನ್, ಜಂಟಿ ನಿರ್ದೇಶಕರು, ಭಾರತ ಸರ್ಕಾರದ ಹಣಕಾಸು ಸಚಿವಾಲಯ, ಇವರಿಗೆ ಕಳುಹಿಸಿಕೊಡಲಾಗಿದೆ. ಇದಕ್ಕೂ ಮುಂಚೆ ಜನವರಿ ತಿಂಗಳ ಅಂತ್ಯದವರೆಗಿನ ಖರ್ಚಿನ ತಃಖ್ತೆಯನ್ನು ಫೆಬ್ರುವರಿ ೨೧ರಿಂದ ೨೪ರವರೆಗೆ ರಾಜ್ಯದಲ್ಲಿ ಪ್ರವಾಸ ಮಾಡಿದ ಕೇಂದ್ರ ಅಧ್ಯಯನ ತಂಡಕ್ಕೂ ಒದಗಿಸಿ ಕೊಡಲಾಗಿದ್ದು ಈ ಅಧ್ಯಯನ ತಂಡದಲ್ಲಿ ಭಾರತ ಸರ್ಕಾರದ ಕೃಷಿ ಮತ್ತು ಹಣಕಾಸು ಸಚಿವಾಲಯಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಒಳಗೊಂಡಿದ್ದು ಕೇಂದ್ರ ಸರ್ಕಾರದ ಕೃಷಿ ಸಚಿವಾಲಯದ ಅಪರ ಕಾರ್ಯದರ್ಶಿಗಳು ಈ ತಂಡದ ನಾಯಕತ್ವವನ್ನು ವಹಿಸಿದ್ದರು.

೧.೮) ಈ ಮೇಲೆ ಹೇಳಿರುವಂತೆ ವೇದ್ಯವಾಗುವುದೇನೆಂದರೆ ರಾಜ್ಯ ಸರ್ಕಾರವು ಕೇಂದ್ರ ಧನ ಸಹಾಯದ ಎದುರಾಗಿ ಖರ್ಚು ಮಾಡಿದ ಹಣದ ವಿವರಗಳನ್ನು ಈಗಾಗಲೇ ಸೂಕ್ತ ಸಮಯದಲ್ಲಿ ಕಳುಹಿಸಿಕೊಡಲಾಗಿದೆ. ಅಲ್ಲದೇ, ಹೀಗೆ ಕಳುಹಿಸಿಕೊಟ್ಟ ಖರ್ಚಿನ ವಿವರಗಳನ್ನು ಗಮನಕ್ಕೆ ತೆಗೆದು ಕೊಂಡು ಭಾರತ ಸರ್ಕಾರವು ನಿಗದಿಪಡಿಸಿದ ಮಿತಿಯಾದ ೫೩೩.೩೧ ಕೋಟಿಗೆ ಎದುರಾಗಿ ಈವರೆಗೆ ೪೩೩.೧೬ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

೧.೯) ನಾನು ಈ ಬಗ್ಗೆ ಈ ಸಭೆಯಲ್ಲಿ ವಿಷದಪೂರ್ಣವಾಗಿ ಹೇಳಲೇಬೇಕಾದ ಅಂಶವೇನೆಂದರೆ, ರಾಜ್ಯ ಸರ್ಕಾರವು ಮನವಿ ಪತ್ರವನ್ನು ಒದಗಿಸಿಕೊಟ್ಟ ೩ ತಿಂಗಳ ಮೇಲೆ ಕೇಂದ್ರ ಸರ್ಕಾರವು ಕ್ರಮ ತೆಗೆದುಕೊಂಡಿದ್ದು ಇದರಿಂದಾಗಿ ರಾಜ್ಯ ಸರ್ಕಾರದ ಹಣದ ಸಂಪನ್ಮೂಲಗಳ ಮೇಲೆ ಹೆಚ್ಚಿನ ಒತ್ತಡ ಉಂಟಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ರಾಜ್ಯ ಸರ್ಕಾರವು ಎಲ್ಲಾ ಪ್ರಯತ್ನಗಳನ್ನು ಮಾಡಿ ಆದಲ್ಲದೆ ಸ್ವತ: ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು, ಕೇಂದ್ರ ಕೃಷಿ ಮಂತ್ರಿ ಹಣಕಾಸು ಸಚಿವರಿಗೆ ಮಂತ್ರಿ ಪ್ರಧಾನಮಂತ್ರಿಯವರಿಗೆ ವೈಯಕ್ತಿಕವಾಗಿ ಮನವಿ ಮಾಡಿದರೂ ಕೂಡ ವಿಳಂಬ ವಾಗಿದೆಯೆಂದು ಹೇಳಲು ವಿಷಾಧಿಸುತ್ತೇನೆ.

೧.೧೦) ಪಂಜಾಬ್ ರಾಜ್ಯದಿಂದ ಮೇವನ್ನು ತುರ್ತಾಗಿ ಸಾಗಾಣಿಕೆ ಮಾಡಲು ಸಹಕಾರಿಯಾದ ಕೇಂದ್ರದ ಕೃಷಿ ಮತ್ತು ರೈಲ್ವೆ ಮಂತ್ರಿಗಳನ್ನು ನಾನು ಈ ಸಮಯದಲ್ಲಿ ಹೃತ್ಪೂರ್ವಕವಾಗಿ ಅಭಿನಂದಿ ಸುತ್ತೇನೆ. ಆಲ್ಲದೆ ದಿನಾಂಕ ೧೪-೧-೮೬ರಂದು ರಾಜ್ಯಕ್ಕೆ ಸ್ವತ: ಭೇಟಿ ನೀಡಿ ಇಲ್ಲಿನ ಬರಗಾಲ ಪರಿಸ್ಥಿತಿಯ ಅಧ್ಯಯನ ನಡೆಸಿ ಮತ್ತು ರಾಜ್ಯ ಸರ್ಕಾರವು ತೆಗೆದುಕೊಂಡಿರುವ ಪರಿಹಾರ ಕಾರ್ಯ ಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಕ್ಕಾಗಿ ನಾನು ಕೇಂದ್ರದ ಕೃಷಿ ಸಚಿವರಿಗೆ ಮಂತ್ರಿಮ್ಮೆ ನನ್ನ ಕೃತಜ್ಞತೆಗಳನ್ನು ವ್ಯಕ್ತಪಡಿಸುತ್ತೇನೆ. ಕೇಂದ್ರ ಸರ್ಕಾರವು ಈ ಕಷ್ಟದ ದಿನಗಳಲ್ಲಿ ರಾಜ್ಯ ಸರ್ಕಾರಕ್ಕೆ ತೋರಿರುವ ಅನುಕಂಪ ಮತ್ತು ಸಹಾಯವು ಸಧ್ಯದಲ್ಲಿಯೇ ಫಲಪ್ರದವಾಗುವುದೆಂದು ಆಶಿಸುತ್ತೇನೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಕೇಂದ್ರದ ಕೃಷಿ ಸಚಿವರನ್ನು ರಾಜ್ಯಕ್ಕೆ ಮಂತೊಮ್ಮೆ ಒಂದು ದೀರ್ಘವಾದ ಭೇಟಿಯನ್ನು ಕೊಟ್ಟು ಅಭಾವ ಪೀಡಿತ ಪ್ರದೇಶಗಳಲ್ಲಿ ಬವಣೆಪಡುತ್ತಿರುವ ಜನಗಳ ದುಸ್ಥಿತಿಯನ್ನು ಮನವರಿಕೆ ಮಾಡಿಕೊಂಡು ಈ ಜನತೆಗೆ ಹೆಚ್ಚಿನ ಪರಿಹಾರ ಒದಗಿಸುವ ದಿಶೆಯಲ್ಲಿ ಹೆಚ್ಚಿನ ಮೊತ್ತದ ಕೇಂದ್ರ ಸಹಾಯವನ್ನು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿಸಿಕೊಟ್ಟು ರಾಜ್ಯ ಸರ್ಕಾರವು ಪರಿಹಾರ ಕಾರ್ಯಗಳನ್ನು ತ್ವರಿತವಾಗಿ ನಡೆಸಿಕೊಂಡು ಹೋಗಲು ಅನುವು ಮಾಡಿಕೊಡಿ ಎಂತೆ ಮಂತ್ರಿಮ್ಮೆ ಅವರಿಗೆ ನಾನು ಆಹ್ವಾನ ನೀಡುತ್ತೇನೆ.

೧.೧೧) ೧೯೮೬—೮೭ರ ಹೊಸ ಹಣಕಾಸು ವರ್ಷದಲ್ಲಿ ಏಪ್ರಿಲ್‌ನಿಂದ ಜೂನ್ ೧೯೮೬ರವರೆಗೆ ಯೋಜನಾ ಕಾರ್ಯಕ್ರಮಗಳಾದ, ಎನ್. ಆರ್. ಇ. ಪಿ., ಆರ್.ಎಲ್. ಇ.ಜಿ.ಪಿ., ಡಿ.ಪಿ.ಎ.ಪಿ. ಮತ್ತಿತರೇ ಯೋಜನೆಗಳಲ್ಲಿ ದೊರೆಯುವ ಹಣ ಮತ್ತು ಹೊಸ ವರ್ಷದಲ್ಲಿ ದೊರೆಯುವ ಮಾರ್ಜಿನ್ ಹಣ ಮತ್ತು ಕೇಂದ್ರದಿಂದ ಒದಗ ಬಹುದಾದ ಧನಸಹಾಯ ದಿಂದ ಪರಿಹಾರ ಕಾಮಗಾರಿಗಳನ್ನು ಸಂಲಲಿತವಾಗಿ ನಡೆಸಿ ಕೊಂಡು ಹೋಗಲಾಗುವುದೆಂಬ ಆಶ್ವಾಸನೆಯನ್ನು ಮಾನ್ಯ ಸದಸ್ಯರಿಗೆ ಈ ಸದನದಲ್ಲಿ ನೀಡಲು ಇಚ್ಚಿಸು ತ್ತೇನೆ. ಅತೀ ತೀವ್ರ ಮತ್ತು ತೀವ್ರ ತರವಾಗಿ ಬರಗಾಲ ಪರಿಸ್ಥಿತಿ ಇರುವ ಎಲ್ಲ ಕಡೆಗಳಲ್ಲೂ ಪರಿಹಾರ ಕಾಮಗಾರಿಗಳನ್ನು ಕೈಗೆತ್ತಿಕೊಂಡು, ಮುಂದೆ ಬರುವ ಎಲ್ಲರಿಗೂ ಉದ್ಯೋಗವನ್ನು ಒದಗಿಸಿಕೊಡ ಲಾಗುವುದು. ಎಲ್ಲೆಲ್ಲಿ ಅಗತ್ಯವಿದೆಯೋ ಅಲೆಲ್ಲಾ ಮೇವಿನ ಬ್ಯಾಂಕುಗಳು ಮತ್ತು ಗೋಶಾಲೆಗಳನ್ನು ತೆರೆಯಲಾಗುವುದು ಮತ್ತು ಇವುಗಳನ್ನು ೧೯೮೬ರ ಜೂನ್ ಅಂತ್ಯದವರೆಗೆ ನಡೆಸಿಕೊಂಡು ಹೋಗ ಲಾಗುವುದು. ಸರ್ಕಾರದ ಪ್ರೇರಣೆಯಿಂದ ರೈತರು ಬೆಳೆದಿರುವ ಮೇವನ್ನು ಈಗಾಗಲೇ ನಿಗದಿಪಡಿಸಿರುವ ಧಾರಣೆ ಕ್ರಯದಂತೆ ಖರೀದಿ ಮಾಡಲಾಗುವುದು ಮತ್ತು ಇದಕ್ಕೆ ಬೇಕಾದ ಹಣವನ್ನು ಒದಗಿಸಲಾಗು ವುದು. ಹೀಗೆ ಖರೀದಿಸಲಾದ ಮೇವನ್ನು ಗೋಶಾಲೆಗಳಲ್ಲಿ ಮತ್ತು ಮೇವಿನ ಬ್ಯಾಂಕುಗಳಲ್ಲಿ ಉಪ ಯೋಗಿಸಲಾಗುವುದು. ಇದಲ್ಲದೆ ಉತ್ತರದ ರಾಜ್ಯಗಳಾದ ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶದಿಂದ ಕೇಂದ್ರದ ಸಹಾಯವನ್ನು ಉಪಯೋಗಿಸಿಕೊಂಡು ಮೇವಿನ ಆವಂದನ್ನು ಮುಂದುವರಿಸಿ ಕೊಂಡು ಹೋಗಲಾಗುವುದು. ಈ ರೀತಿ ಜಾನುವಾರು ಸಂಪತ್ತನ್ನು ಎಲ್ಲ ರೀತಿಯಲ್ಲೂ ಕಾಪಾಡಿ

ಕೊಂಡು ಬರಲಾಗುವುದು. ಅಭಾವ ಪೀಡಿತ ಪ್ರದೇಶಗಳಲ್ಲಿನ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸಾಕಷ್ಟು ಕುಡಿಯುವ ನೀರಿನ ಪೂರೈಕೆಯನ್ನು ಮಾಡಲಾಗುವುದು. ಅತೀ ತೀವ್ರ ಮತ್ತು ತೀವ್ರ ಬರಗಾಲ ಪರಿಸ್ಥಿತಿಯಿರುವ ಪ್ರದೇಶಗಳಲ್ಲಿ ಅಗತ್ಯವೆನಿಸಿದಲ್ಲಿ ಗಂಜಿ ಕೇಂದ್ರಗಳನ್ನು ಸ್ಥಾಪಿಸಿ ವೃದ್ಧ ಮತ್ತು ಅಬಲ ಜನತೆಗೆ ಊಟ ಒದಗಿಸಿಕೊಡುವ ಏರ್ಪಾಡು ಮಾಡಲಾಗುವುದು. ಒಟ್ಟಿನಲ್ಲಿ ಭಾಧಿತ ಜನತೆಗೆ ಪರಿಹಾರ ಒದಗಿಸುವ ದಿಸೆಯಲ್ಲಿ ಏನೇನು ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನೆಲ್ಲಾ ತೆಗೆದುಕೊಳ್ಳಲಾಗುವುದು. ಈ ದಿಸೆಯಲ್ಲಿ ಈ ಸದನದ ಸಾನ್ಯ ಸದಸ್ಯರು, ಸ್ವಯಂಸೇವಾ ಸಂಘ ಸಂಸ್ಥೆಗಳು ಮತ್ತು ಇತರೇ ಸಂಸ್ಥೆಗಳು ಮತ್ತು ವ್ಯಕ್ತಿಗಳು ಸಹಕಾರ ಕೊಟ್ಟು ಸಕ್ರಿಯ ಪಾತ್ರ ವಹಿಸಬೇಕೆಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ಅಲ್ಲದೇ ಭಾರತ ಸರ್ಕಾರವು ಕೂಡ ಮುಕ್ತ ಹಸ್ತದ ಧನ ಸಹಾಯವನ್ನು ಆದಷ್ಟು ಬೇಗನೆ ಬಿಡುಗಡೆ ಮಾಡುವರೆಂದು ಆಶಿಸುತ್ತೇನೆ.

STATEMENT-I

STATEMENT SHOWING THE CEILINGS APPROVED AMOUNT RELEASED AND EXPENDITURE INCURRED UNDER SCARCITY RELIEF DURING 1985-86

Rs. in lakhs

Sl. No.	Particulars	Ceilings approved	Amount released (Up to date)	Expenditure incurred as on 12-2-1986
1	2	3	4	5
	I DRINKING WATER SUPPLY ;			
1	Transportation of Drinking Water in rural areas	225-00	167-00	103-70
2	Revival of piped water supply schemes	25-00	40-00	1102-04
3	Rejuvenation of Hand pumps	80-00	80-00	
4	Sinking of Borewells in rural areas (Plan)	830-00	1395-60	Reserve
5	Rejuvenation of Handpumps (Plan)	46-00	4-40	
6	Mini Water Supply Schemes	110-00	132-50	187-58

1	2	3	4	5
7	Sinking of Borewells in urban areas	180-00	347-00	235-37
	Sub Total I	1496-00	2166-50	1628-69
	II FODDER			
1	Transportation and Supply	100-00	173-00	69-99
2	Procurement from Punjab, Haryana and U.P.	-	50-00 50-00	35-00 Reserve
3	Cutting grass in Forest	-	20-00	9-86
4	Loans for fodder cultivation to defaulters of Co-operative dues	-	70-00	-
5	Goshalas (50 Goshala at Rs. 2-00 lakhs each)	-	100-00	26-92
6	Fodder cultivation in State farms			
	Agriculture 10-00			9-69
	AH & VS 10-00			9-50
	Horticulture 10-00	-	50-00	5-47
	Forest 10-00			3-90
	U.A.S. 10-00			3-26
7	Supply of enriched feed to cattle Director AH & VS	150-00	100-00	100-00
	Sub Total II	250-00	613-00	273-59

III	PUBLIC HEALTH	75-00	75-00	73-14
IV	Special Nutrition	230-00	130-00	73-83
V	Agriculture :			
	1 Plant Protection	150-00	135-00	52-23
	2 Agriculture inputs	311-00	356-00	334-27
	Sub Total V	461-00	491-00	386-50
VI	Rescheduling of crop loan	150-00	-	-
VII	EMPLOYMENT GENERATION			
1	Spl. DC, DRDS		4309-00	3888-04
2	Secy. II Irrn. for employment Gen. works in Major and MI Projects	2669-00	250-00	107-22
	Sub Total IV	2669-00	4559-00	3995-26
	Grand Total	5331-00	8034-50	6431-01

STATEMENT SHOWING THE AMOUNT RELEASED UNDER STATEMENT

Sl. No.	Name of the District	282 Sinking of B.W.	289 Transportation Drinking Water	Fodder
1	Bangalore	27.40	2.50	2.50
2	Kolar	27.60	5.00	12.50
3	Tumkur	49.00	5.00	18.50
4	Chitradurga	7.95	7.50	15.00
5	Shimoga	11.10	1.50	1.00
6	Mysore	12.55	2.50	10.50
7	Mandya	11.50	1:50	2.00
8	Chickmagalure	11.70	1.50	2.00
9	Hassan	9.20	2.00	5.00
10	Kodagu	9.20	—	—
11	Dakshina Kannada	10.40	—	—
12	Gulbarga	48.20	13.00	9.50
13	Bidar	7.55	11.00	3.00
14	Raichur	12.50	16.40	18.00
15	Bellary	17.15	11.00	19.00
16	Belgaum	17.95	25.50	14.00
17	Bijapur	20.95	27.50	16.00
18	Dharwad	21.10	33.60	22.50
19	Uttara Kannada	10.00	—	—
20	State Level	4.00	—	2.00
	Total	347.00	167.00	173.00

SCARCITY RELIEF DURING 1985-86 TO end of 14-3-86 -II

(Rs. in lakhs)

289 Public Health	289 Spl. Nutrition	289 Veterinary care cattle camps	305 Agril (MiniKits-PP	310 A..H V.C. enriched feed
5.89	3.60	4.00	15.92	9.53
5.12	5.00	8.00	15.25	8.16
5.29	3.90	6.00	17.09	7.35
4.35	5.51	8.00	39.27	6.73
2.62	3.11	—	32.52	4.23
5.72	6.54	4.00	18.31	7.06
4.44	3.40	4.00	6.68	5.11
1.87	1.20	4.00	7.81	2.26
3.44	4.00	4.00	12.01	4.43
0.61	—	—	—	—
—	—	—	—	—
5.35	8.00	10.00	38.42	7.32
2.50	7.14	4.00	16.47	3.76
3.53	3.59	6.00	40.66	6.57
3.28	4.06	6.00	42.88	5.90
1.31	4.19	10.00	24.47	5.12
5.36	7.72	10.00	31.83	7.97
5.15	8.72	12.00	40.45	7.93
0.98	0.32	—	5.76	—
8.29	50.00	—	85.20	0.57
75.00	130.00	100.00	491.00	100.00

REL

1	Name of the			310 A. H. cultivation of Fo	
No.	Districts	Agricul-ture	A.H. & V.S.	Horti-culture	CCF
1.	Bangalore	—	1.60	0.15	1.87
2.	Kolar	—	—	0.50	1.63
3.	Tumkur	0.94	0.60	0.80	1.50
4.	Chitradurga	0.94	1.95	0.15	1.57
5.	Shimoga	0.94	—	0.70	1.75
6.	Mysore	—	0.40	1.55	2.50
7.	Mandya	—	0.40	0.60	1.50
8.	Chickmagalur	—	1.40	0.10	1.25
9.	Hassan	—	—	0.40	1.00
10.	Kodagu	—	0.40	0.65	0.75
11.	Dakshina Kannada	—	1.00	0.95	0.75
12.	Gulbarga	—	—	0.55	1.50
13.	Bidar	—	0.20	0.05	1.50
14.	Raichur	3.10	0.40	0.30	0.76
15.	Bellary	1.04	0.45	0.80	1.67
16.	Belgaum	1.04	—	1.00	2.65
17.	Bijapur	—	0.20	0.10	0.50
18.	Dharwad	—	1.00	0.15	1.85
19.	Uttara Kannada	—	—	0.25	3.50
	State Level	2.00	—	0.25	—
	Total	10.00	10.00	10.00	30.00

I Secretary- II Irrigation under 533 Co for employment Ganera-

II Director of Animal Husbandary and Veternary Services for Haryana

EASES

dder		314 CD	314 CD	705	
UAS	Total	NREP Scarcity	Borewells PHE	Agrl. loans	Total
—	3.62	227.00	85.75	—	387.71
—	2.13	303.00	68.70	2.00	462.46
—	3.84	320.00	79.70	3.00	518.67
0.08	4.69	290.00	52.00	5.00	446.00
1.05	4.42	187.00	91.00	1.00	339.52
—	4.45	240.00	69.50	2.00	383.13
0.70	3.20	120.00	39.50	3.00	204.33
—	2.75	162.50	9.00	1.00	207.59
0.25	1.65	252.50	54.60	4.00	356.85
0.04	1.84	15.00	5.00	—	31.65
—	2.70	—	36.00	—	49.10
0.55	2.60	337.00	57.80	5.00	537.19
—	1.75	96.00	30.30	2.00	185.47
—	4.56	315.00	42.00	6.00	474.81
0.65	4.61	225.00	32.35	6.00	377.23
—	4.69	311.00	94.00	6.00	518.23
0.85	1.65	345.00	47.50	6.00	527.48
—	3.00	498.00	62.80	6.00	721.23
—	3.75	65.00	26.00	—	111.81
5.85	8.08	—	664.60	12.00	
			4.40		839.14
10.00	70.00	4309.00	1652.50	70.00	7684.50
ration work		...	...	...	250.00
procurement and transportation of fodder from Punjab and					100.00
			Grand Total		8034.50

Statement-

Statement showing the expenditure incurred under

Sl. No.	Name of the District	282 Sinking of B. W.	289 Transportation	
			Drinking water	Fodder
1	2	3	4	5
1.	Bangalore	20.38	0.18	0.38
2.	Kolar	19.04	1.80	7.17
3.	Tumkur	34.00	0.94	9.18
4.	Chitradurga	4.93	2.00	4.33
5.	Shimoga	7.94	0.04	0.49
6.	Mysore	9.00	0.13	0.89
7.	Mandya	5.00	-	0.57
8.	Chickmagalur	4.95	1.74	0.90
9.	Hassan	6.75	-	0.43
10.	Kodagu	6.75	-	-
11.	Dakshina Kannada	4.40	-	-
12.	Gulbarga	36.00	6,41	2.07
13.	Bidar	5.00	11.61	-
14.	Raichur	8.50	7.88	5.96
15.	Bellary	12.00	9.81	3.32
16.	Belgaum	13.23	20.02	4.40
17.	Bijapur	15.50	15.67	7.22
18.	Dharwad	17.00	25 47	22.68
19.	Uttara Kannada	5.00	-	-
	State Level	-	-	35.00*
	Total	235.37	103.70	104.99

Towards Procurement and Transportation of Fodder from Punjab

III

Scarcity Relief During 1985 86-to end of 28-2-1986

(Rs. in lakhs)

289 special nutrition	289 public health	289 V.C. cattle camps	305 Agril. (minikits PP)	310. A.H. Veterinary care nriched feed
6	7	8	9	10
5.89	5.05	–	15.27	65.03
5.12	3.82	0.35	14.81	3.03
5.29	3.66	1.49	16.24	3 58
4.36	5.14	1.50	34.86	2.48
2.62	2.84	–	30.80	1.88
5.72	5.34	0.85	18.00	2.57
4.44	3.23	0.20	6.49	1.94
1.88	1.22	4.00	6.93	0.83
3.44	2.61	–	11.49	1.68
0.60	–	–	–	–
–	–	–	–	–
5.35	7.82	–	37.80	2.98
2.50	7.33	–	17.19	2.47
3.53	3.55	1.08	39.89	2.23
3.28	4.06	0.61	40.76	1.05
1.31	4.19	2.00	22.79	3.05
5.36	6.31	2.84	30.31	3.01
5.14	7.60	12.00	39.85	–
0.98	0.06	–	–	–
6.33	–	–	3.22	1.29
73.14	73.83	26.92	386.50	100.00

and Haryuana.

Sl. No.	Name of the District	310 A.H cultivation of Fodder			
		Agrl.	AH & VS	Horti-culture	CCF
1	2	3	4	5	6
1	Bangalore	–	1-60	0-11	0-65
2	Kolar	–	–	0-29	0-73
3	Tumkur	0-94	0-49	0-64	0-89
4	Chitradurga	0-94	1-86	0-09	0-50
5	Shimoga	0-94	–	0-41	0-52
6	Mysore	–	0-40	1-26	0-82
7	Mandya	–	0-30	0-32	0-35
8	Chickmagalur	–	1-15	0-08	0-70
9	Hassan	–	–	0-27	0-10
10	Kodagu	–	0-26	0-58	0-07
11	Dakshina Kannada	–	0-73	0-32	–
12	Gulbarga	–	–	0-10	0-86
13	Bidar	–	0-15	0-02	0-20
14	Raichur	3-84	0-18	0-24	0-18
15	Bellary	1-77	0-34	0-21	0-41
16	Belgaum	1-04	–	0-14	0-90
17	Bijapur	–	0-15	0-08	0-23
18	Dharwad	–	0-79	0-10	0-35
19	Uttara Kannada	–	–	0-22	4-81
	State Level	0-22	1-10	–	0-49
	Total	9-69	9-50	5-47	13-76

(Rs. in Lakhs)

UAS	Total	314 CD NREP Scarcity	314 CD Borewells PHE	33 Capital Medium Minor irrigation	Total
7	8	9	10	11	12
0-47	2-83	209-45	106-84	3-55	434-85
-	1-02	288-02	89-98	0-74	434-90
0-31	3-27	295-37	123-21	1-41	497-64
0-03	3-42	288-43	47-46	12-74	361-65
0-30	2-17	167-25	91-90	0-18	308-11
0-01	2-49	212-06	84-59	13-74	355-38
0-40	1-35	77-81	89-45	6-50	197-00
0-02	1-95	160-80	43-19	1-44	229-63
0-34	1-01	225-44	73-67	-	326-52
-	0-91	1-87	26-17	-	36-30
-	1-05	-	30-08	-	35-53
-	0-96	314-06	72-35	10-00	495-80
0-02	0-39	52-31	16-30	35-49	150-49
-	4-44	268-89	42-44	12-56	400-95
0-19	2-92	242-44	40-59	4-57	366-31
-	2-08	292-22	142-22	0-47	507-98
0-03	0-49	311-39	63-29	0-93	462-32
0-19	1-43	479-44	76-02	2-76	689-39
0-03	5-06	50-79	29-87	0-14	91-90
0-62	2-43	-	-	-	48-27
3-26	41-68	3888-04	1289-62	107-22	6431-01

೪–೧೦ ಪಿ. ಎಂ.

ಮಾನ್ಯ ಸಭಾಪತಿಯವರೆ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಈ ಸದನಕ್ಕೆ ಅನೇಕ ವಿವರಗಳನ್ನು ಈ ಮೊದಲೇ ಕೊಟ್ಟಿದ್ದೇನೆ. ಎಲ್ಲೆಲ್ಲಿ ನಾವು ಕೆಲಸಗಳನ್ನು ತೆಗೆದುಕೊಂಡಿದ್ದೇವೆ ಯಾವ ಯಾವ ತಾಲೂಕೆಂಗಳಲ್ಲಿ, ಜಿಲ್ಲೆಗಳಲ್ಲಿ ತೆಗೆದುಕೊಂಡಿದ್ದೇವೆ ಎನ್ನತಕ್ಕ ವಿವರಗಳನ್ನುಳ್ಳ ಒಂದು ಪಟ್ಟಿಯನ್ನೂ ನಾನು ಮಾಡಿಕೊಟ್ಟಿದ್ದೇನೆ ಈ ಹಿನ್ನೆಲೆಯಲ್ಲಿ ಇತ್ತೀಚಿನ ಪರಿಸ್ಥಿತಿಯನ್ನೂ ಈ ನನ್ನ ಹೇಳಿಕೆಯಲ್ಲಿ ತಿಳಿಸಿ ಎಷ್ಟು ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ, ಎಷ್ಟು ಹಣ ಖರ್ಚಾಗಿದೆ ಎನ್ನತಕ್ಕ ವಿವರಗಳನ್ನೂ ಮಾನ್ಯ ಸದಸ್ಯರಿಗೆ ಕೊಟ್ಟಿದ್ದೇನೆ.

ಇನ್ನು ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಒಂದು ಪ್ರಶ್ನೆಯನ್ನು ಏನು ಕೇಳಿದರೆಂದರೆ ಕಂದಾಯ ಇಲಾಖೆಯ ನೌಕರರು ಮಂಷ್ಕರವನ್ನು ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ ಎನ್ನತಕ್ಕ ವಿಚಾರದಲ್ಲಿ. ಹಿಂದೆ ಈ ಕಂದಾಯ ಇಲಾಖೆಯವರು ಒಂದುಸಾರಿ ನೋಟೀಸ್‌ನ್ನು ಕೊಡದೆಯೇ ಒಂದು ದಿನದಮಟ್ಟಿಗೆ ಪೆನ್ ಡೌನ್ (ಲೇಖನಿಸ್ತಬ್ಧ) ಮುಷ್ಕರ ಮಾಡಿದ್ದರು. ಆದಾದ ನಂತರ ಮುಖ್ಯ ಕಾರ್ಯದರ್ಶಿಯವರು ಇವರನ್ನೆಲ್ಲಾ ಚರ್ಚೆಗೆ ಆಹ್ವಾನಿಸಿದಾಗ ಆದರ ಪ್ರಕಾರ ಅವರು ಚರ್ಚೆಯಲ್ಲಿ ಭಾಗವಹಿಸಿ ಮುಖ್ಯ ಕಾರ್ಯದರ್ಶಿಯವರ ಜೊತೆಯಲ್ಲಿ ಸಾಕಷ್ಟು ಚರ್ಚೆ ಮಾಡಿ ಕೊನೆಗೆ ಒಂದು ಅಂತಿಮ ತೀರ್ಮಾನಕ್ಕೆ ಬಂದರು ಆದರೆ ಕೆಲವು ವಿಚಾರಗಳಲ್ಲಿ ನೌಕರರು ನಿರ್ದಿಷ್ಟವಾದ ನಿರ್ಣಯ ಕೈಗೊಳ್ಳಬೇಕೆಂದು ಮಾನ್ಯ ಮುಖ್ಯ ಕಾರ್ಯದರ್ಶಿಯವರನ್ನು ಒತ್ತಾಯ ಮಾಡಿದಾಗ, ನಿಮ್ಮ ಅಭಿಪ್ರಾಯದ ಪ್ರಕಾರ ನಾವು ಕೆಲವು ವಿಚಾರಗಳಲ್ಲಿ ನಿರ್ಣಯಗಳನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲ ಎಂದು ಕಾರ್ಯದರ್ಶಿಯವರು ಸ್ಪಷ್ಟವಾಗಿ ತಿಳಿಸಿದರು. ನಂತರ ನಾನು ಈ ನೌಕರರ ಸಂಘದ ಪದಾಧಿಕಾರಿಗಳನ್ನು ಕರೆದು ಆಣುವು ಮಾಡಿಕೊಟ್ಟಿ ಮೊದಲನೆಯ ದಿವಸ ಅವರು ಬಂದಾಗ ನಮ್ಮ ಎಲ್ಲಾ ಜಿಲ್ಲಾ ಪ್ರತಿನಿಧಿಗಳನ್ನೂ ಬರಮಾಡಿಕೊಂಡು ಅವರ ಜೊತೆ ಚರ್ಚಿಸಿದನಂತರ ತಮ್ಮೊಡನೆ ಪ್ರಸ್ತಾಪ ಮಾಡುವುದಾಗಿ ಹೇಳಿದರು. ಅನಂತರ ಒಂದೆರಡು ದಿನಗಳು ಕಳೆದಮೇಲೆ ನಾನು ಅವರ ಜೊತೆ ಚರ್ಚೆಮಾಡಿದ್ದೇನೆ ಅಲ್ಲಿ ಅವರ ಬಹುತೇಕ ಬೇಡಿಕೆಗಳನ್ನೆಲ್ಲಾ ನಾನು ಒಪ್ಪಿಕೊಂಡಿದ್ದೇನೆ. ಆದರೆ ಆಲ್ಲಿ ಒಂದು ವಿಚಾರದಲ್ಲಿ ಮಾತ್ರ ನನ್ನನ್ನು ಬಹಳ ಒತ್ತಾಯ ಮಾಡಿದರು ಅದು ಏನೆಂದರೆ ನಾಡ ಆಫೀಸುಗಳನ್ನು ತೆರೆಯುವ ಬಗ್ಗೆ. ಈ ವಿಚಾರದಲ್ಲಿ ಮಾನ್ಯ ಮುಖ್ಯ ಕಾರ್ಯದರ್ಶಿಯವರು ಪ್ರತಿ ವರ್ಷ ಹೋಬಳಿ ಮಟ್ಟದಲ್ಲಿ ಈ ನಾಡ ಆಫೀಸುಗಳನ್ನು ಪ್ರಾರಂಭ ಮಾಡುವುದಾಗಿ ಭರವಸೆ ನೀಡಿದರು. ಆದರೆ ನಾನು ಏನು ಹೇಳಿದೆ ಎಂದರೆ, ಪ್ರತಿಯೊಂದು ಸಬ್ ಡಿವಿಜನ್‌ಗೆ ಒಂದೊಂದರಂತೆ ಆಫೀಸನ್ನು ತೆರೆಯುವುದಾಗಿ ಹೇಳಿದೆ. ಎಲ್ಲಾ ವಿವರಗಳೂ ಚರ್ಚೆಯಾದಮೇಲೆ ಮತ್ತೊಂದು ಸಾರಿ ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಚರ್ಚೆಯಾದಾಗ, ಒಂದೊಂದು ತಾಲೂಕಿಗೆ ಒಂದೊಂದು ಆಫೀಸನ್ನು ಈ ವರ್ಷದಿಂದಲೇ ಪ್ರಾರಂಭಮಾಡಲು ಕ್ರಮ ಕೈಗೊಳ್ಳುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದರೂ ಪ್ರತಿಯೊಂದು ತಾಲೂಕಿನಲ್ಲೂ ಅಂದರೆ ೧೭೫ ತಾಲೂಕಿನಲ್ಲೂ ಈ ವರ್ಷದಿಂದಲೇ ಆಫೀಸುಗಳನ್ನು ತೆರೆಯಲು ಕ್ರಮ ಕೈಗೊಳ್ಳುತ್ತೇವೆಂದು ಒಪ್ಪಿಗೆಯನ್ನು ಕೊಟ್ಟಾಗ ಆವರು ಸಂತೋಷಗೊಂಡು ನನ್ನನ್ನೂ ಮತ್ತು ಮಾನ್ಯ ಮುಖ್ಯಮಂತ್ರಿಯವರನ್ನೂ ಅಭಿನಂದಿಸಿ ತಮ್ಮ ಮನಸ್ಸಿಗೆ ಸಮಾಧಾನ ಸಿಕ್ಕಿದೆ ಎಂದು ಹೇಳಿ ಹೋದರು.

ಶ್ರೀ ಆರ್. ವೆಂಕಟರಾಮಯ್ಯ.—ಅವರು ಇದನ್ನು ಒಪ್ಪಿಕೊಂಡಿಲ್ಲ.....

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಹೇಳಬಹುದು, ಆದರೆ ನಾನು ಹೇಳುತ್ತಿದ್ದೇನೆ...

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಅಡ್ಡದಾರಿಯನ್ನು ಹಿಡಿಯುತ್ತಿದ್ದೀರಿ ಆದರೆ ಬೇಡ ಮಂಡಲ್ ಪಂಚಾಯಿತ್ ಬಗ್ಗೆ ಚರ್ಚೆಯಾಗಿದೆ. ಈ ವಿಚಾರದಲ್ಲಿ ಎಲ್ಲಾ ಒಪ್ಪಂದವೂ ಆಗಿ ನಾವು ಈ ಚಳುವಳಿಯನ್ನು ನಿಲ್ಲಿಸುತ್ತೇವೆ, ಆದರೆ ಮಾನ್ಯ ಕಂದಾಯ ಮಂತ್ರಿಗಳಿಂದ ನಮಗೆ ಲಿಖಿತ ಉತ್ತರ ಬೇಕೆಂದು ಕೇಳಿದರು ಆದರ ಪ್ರಕಾರ ನಾನು ಅವರಿಗೆ ಒಂದು ಲಿಖಿತ ಉತ್ತರವನ್ನು ಕೊಟ್ಟಿದ್ದೇನೆ. ಅನಂತರ ಅದಕ್ಕೆ ಅವರು ಒಪ್ಪಿಕೊಂಡು ಹೋಗಿದ್ದರು ಆದರೆ ಮತ್ತೆ ಅವರು ಒಂದೂ ರ್ಯಾಲಿಯನ್ನು ಕರೆದು ಆದರಲ್ಲಿ ನನ್ನನ್ನು ಭಾಷಣ ಮಾಡುವಂತೆ ಕೇಳಿದರು. ಆದರೆ ಆ ದಿವಸ ನಾನು ಊರಿನಲ್ಲಿರಲಿಲ್ಲ

ದಿಲ್ಲವೆಂದು ಹೇಳಿದ. ಆ ಮೇಲೆ ಮಾನ್ಯ ಗೃಹ ಸಚಿವರಾದ ರಾಚಯ್ಯನವರು ನನ್ನ ಪರವಾಗಿ ಹೋಗಿ ಮಾತನಾಡಿ ಬಂದಿದ್ದಾರೆ ಇಷ್ಟೆಲ್ಲಾ ಆದಮೇಲೆ ಆ ನೌಕರರು ಮುಷ್ಕರವನ್ನು ನಿಲ್ಲಿಸುತ್ತೇವೆಂದು ಒಪ್ಪಿ ಕೊಂಡು ಹೋಗಿದ್ದಾರೆ. ರೆವಿನ್ಯೂ ಕಮಿಷನರ್‌ರವರ ಕಡೆಯಿಂದ ಲಿಖಿತ ಮೂಲಕ ಉತ್ತರವನ್ನೂ ತೆಗೆದುಕೊಂಡಿದ್ದಾರೆ. ಅದರಲ್ಲಿ ಚಳುವಳಿಯನ್ನು ನಿಲ್ಲಿಸಲು ಇವರು ಒಪ್ಪಿಕೊಂಡಿರತಕ್ಕ ಅಂಶವೂ ಇದೆ ಇಷ್ಟಾದರೂ ಕೂಡ ಮತ್ತೆ ಚಳುವಳಿಯನ್ನು ಮಾಡುತ್ತಿದ್ದಾರೆ ತಾಲ್ಲೂಕು ಕಛೇರಿಯಲ್ಲಿ, ಜಿಲ್ಲಾ ಕಛೇರಿ ಯಲ್ಲಿ ಕುಳಿತ ಜನರ ಸೇವೆಯನ್ನು ಮಾಡತಕ್ಕ ಈ ನೌಕರರು ಈರೀತಿ ಚಳುವಳಿಯನ್ನು ಮಾಡತಕ್ಕ ಪ್ರವೃತ್ತಿಯನ್ನು ಕೈಬಿಡಬೇಕು ಇವತ್ತು ರಾಜ್ಯದ ವರಮಾನದಲ್ಲಿ ಬಹಳಷ್ಟು ಹಣವನ್ನು ಈ ನೌಕರರ ಸಂಬಳ ಸಾರಿಗೆಗೋಸ್ಕರ, ಇತರೆ ಸೌಲಭ್ಯಗಳಿಗೋಸ್ಕರ ನಾವು ಖರ್ಚುಮಾಡುತ್ತಿದ್ದೇವೆ. ಆದರೂ ಇವರು ಚಳುವಳಿಯನ್ನು ಮಾಡುತ್ತಿರುವುದರಿಂದ ನಾನು ಪುನ; ಹೇಳುತ್ತಿದ್ದೇನೆ, ಈ ಕೂಡಲೇ ಅವರು ತಮ್ಮ ಸಂಪನ್ನು ನಿಲ್ಲಿಸಿ ಕೆಲಸಕ್ಕೆ ಹಾಜರಾಗಬೇಕು. ರಾಜ್ಯದಲ್ಲಿ ಬರಗಾಲ ಇರತಕ್ಕ ಈ ಕಾಲದಲ್ಲಿ ರೈತರಿಗಾಗಲೀ, ಗ್ರಾಮಾಂತರ ಪ್ರದೇಶದ ಜನರಿಗಾಗಲಿ ಅಥವಾ ನಗರ ಪ್ರದೇಶದ ಜನರಿಗಾಗಲಿ ಇರ ತಕ್ಕ ಕುಂದುಕೊರತೆಗಳನ್ನು ನಿವಾರಣೆ ಮಾಡಬೇಕಾದ ಈ ಸಂದರ್ಭದಲ್ಲಿ ಅವರು ತಮ್ಮ ಚಳುವಳಿ ಯನ್ನು ಕೈಬಿಡಬೇಕು. ಇಲ್ಲದಿದ್ದರೆ ಸರ್ಕಾರ ಅವರ ಮೇಲೆ ಕಾನೂನು ಪ್ರಕಾರ ಏನು ಕ್ರಮ ತೆಗೆದು ಕೊಳ್ಳಬೇಕೋ ಅದನ್ನೆಲ್ಲಾ ತೆಗೆದುಕೊಳ್ಳುವುದಕ್ಕೆ ಯಾವುದೇ ಕಾರಣದಿಂದಲೂ ಹಿಂದು ಮುಂದೆ ನೋಡುವುದಿಲ್ಲ ಎನ್ನತಕ್ಕ ಎಚ್ಚರಿಕೆಯನ್ನು ಅವರಿಗೆ ಕೊಡುತ್ತಿದ್ದೇನೆ. ಈ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಿ, ಜನರಿಗೆ ತೊಂದರೆಯನ್ನು ಕೊಡತಕ್ಕ ಅವರ ಪ್ರವೃತ್ತಿಯನ್ನು ಅವರು ಕೈಬಿಡಬೇಕು ನಾನು ನಾಳೆ ಸೋಮವಾರದವರೆಗೂ ಕಾದು ನೋಡುತ್ತೇನೆ. ಅಷ್ಟರಲ್ಲಿ ಅವರು ಚಳುವಳಿಯನ್ನು ಕೈ ಬಿಡದಿದ್ದರೆ ಕಾನೂನು ಪ್ರಕಾರ ಖಂಡಿತವಾಗಿಯೂ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನತಕ ಮಾತನ್ನು ತಮ್ಮ ಮೂಲಕ ಅವರಿಗೆ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ನಿಮ್ಮ ತೀರ್ಮಾನಕ್ಕೆ ನಾವು ಯಾವುದೇ ರೀತಿಯಲ್ಲೂ ವಿರೋಧ ವಿಲ್ಲ. ನಿಮಗೆ ನಮ್ಮ ಸಂಪೂರ್ಣ ಸಹಕಾರ ಇದೆ ಆದರೆ ನಿಮ್ಮಲ್ಲಿ ಧೈರ್ಯವಿಲ್ಲ ನೀವು ಸರಿಯಾದ ಕ್ರಮವನ್ನು ತೆಗೆದುಕೊಂಡರೆ ತಾನೇ ತಾನಾಗಿ ಧೈರ್ಯ ಬರುತ್ತದೆ.....

ಅಧ್ಯಕ್ಷರು.— ನೀವು ಧೈರ್ಯವನ್ನು ಕೊಟ್ಟರೆ ಅವರಿಗೆ ಧೈರ್ಯ ಬರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ —ಇಂದಿನ ಸರ್ಕಾರವಾಗಲಿ, ಹಿಂದಿನ ಸರ್ಕಾರವಾಗಲಿ, ಸರ್ಕಾರೀ ನೌಕರರಿಗೆ ಏನೇನು ಸೌಲಭ್ಯಗಳನ್ನು ಕೊಡುವುದಕ್ಕೆ ಸಾಧ್ಯವೋ ಆ ಎಲ್ಲ ಸೌಲಭ್ಯಗಳನ್ನೂ ಕೊಡುವುದರಲ್ಲಿ ಹಿಂದುಮುಂದು ನೋಡಿಲ್ಲ. ಆದರೆ ಅವರ ಚಳುವಳಿ ಪ್ರವೃತ್ತಿಯನ್ನು ನಾವು ನೋಡುವುದಕ್ಕೆ ಸಾಧ್ಯವಿಲ್ಲ. ನಾನು ನಾಳೆ ಸೋಮವಾರದವರೆಗೂ ಕಾಯುತ್ತೇನೆ, ಅಷ್ಟರಲ್ಲಿ ಅವರು ತಮ್ಮ ಸಂಪನ್ನು ನಿಲ್ಲಿಸಿ ಕೆಲಸಕ್ಕೆ ಹಾಜರಾಗದಿದ್ದರೆ ಅವರ ಮೇಲೆ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳುತ್ತೇನೆಂದು ಮತ್ತೊಮ್ಮೆ ಹೇಳಬಯಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಉದ್ಭವವಾಗಿರತಕ್ಕ ಭೀಕರ ಬರಗಾಲ ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳಿಕೆಯನ್ನು ಮಾನ್ಯ ಕಂದಾಯ ಸಚಿವರು ಕೊಟ್ಟಿ ದ್ದಾರೆ. ಇದು ಮೊದಲನೆಯದೇನೂ ಅಲ್ಲ ಈ ಬಗ್ಗೆ ನಾವು ಅಂಕಿಅಂಶಗಳ ಸಹಿತ ವಿವರಗಳನ್ನು ಸದನದ ಮುಂದಿಟ್ಟಿರುವುದಾಗಿ ಮಾನ್ಯ ಸಚಿವರು ಹೇಳಿದ್ದಾರೆ. ಅವರು ಅಂಕಿ ಅಂಶಗಳನ್ನು ಕೊಟ್ಟಿರುವುದು ನಿಜ ಆದರೆ ನಾವು ಕೇಳಿದ ಪ್ರಶ್ನೆ ಏನೆಂದರೆ, ಹಿಂದೆ ಬರಗಾಲ ಇದ್ದಾಗ ಅದಕ್ಕೆ ಸಂಬಂಧಪಟ್ಟಂತೆ ತಾವು ಹೇಳಿಕೆಯನ್ನು ಕೊಟ್ಟಿದ್ದೀರಿ. ಈ ಸದನ ಪ್ರಾರಂಭ ಆದಾಗ ಸುಮಾರು ೨-೩ ದಿವಸಗಳ ಕಾಲ ಆ ವಿಷಯವನ್ನು ನಾವು ಸಾಕಷ್ಟು ಚರ್ಚೆಮಾಡಿದ್ದೇವೆ ಇವತ್ತು ನಾವು ಈ ವಿಚಾರ ವನ್ನು ಚರ್ಚೆಗೆ ಇಟ್ಟುಕೊಂಡಿಲ್ಲ, ಕಳೆದ ಸಾರಿ ನಿಮ್ಮ ಹೇಳಿಕೆಯಲ್ಲಿ ಅದು ಜನರಿಗೆ ಉದ್ಯೋಗ ಕೊಡ ತಕ್ಕ ಪ್ರಶ್ನೆ ಇರಬಹುದು, ಜಾನುವಾರುಗಳಿಗೆ ಮೇವನ್ನು ಒದಗಿಸುವ ಪ್ರಶ್ನೆ ಇರಬಹುದು, ಆಹಾರ ಧಾನ್ಯಗಳನ್ನು ವಿತರಣೆ ಮಾಡತಕ್ಕ ಪ್ರಶ್ನೆ ಇರಬಹುದು, ಔಷಧೋಪಚಾರದ ಪ್ರಶ್ನೆ ಇರಬಹುದು, ಯಾವ ಯಾವ ಯೋಜನೆಗಳ ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ಬರತಕ್ಕ ಹಣಕ್ಕೆ ಸಂಬಂಧಪಟ್ಟಂತೆ ಎಂದರೆ ಡಿ.ಪಿ.ಎ.ಪಿ. ಯೋಜನೆಯಲ್ಲಿ ಇರಬಹುದು, ಎನ್. ಆರ್. ಇ.ಪಿ. ಯೋಜನೆ ಇರಬಹುದು, ಆರ್. ಎಲ್. ಇ. ಜಿ. ಪಿ. ಇರಬಹುದು, ಎಷ್ಟು ಹಣ ಖರ್ಚಾಗಿದೆ ಎನ್ನುವ ಅಂಕಿಅಂಶಗಳನ್ನು ನೀವು

ಕೊಟ್ಟಿದ್ದೀರಿ. ನಾವು ಈಗ ಕೇಳಿರತಕ್ಕದ್ದು ಇತ್ತೀಚಿನ ವರದಿ ಕಳೆದ ಸಾರಿ ನೀವು ಒಂದು ಹೇಳಿಕೆಯನ್ನು ಕೊಟ್ಟಮೇಲೆ ನೀವು ಯಾವ ರೀತಿ ಹಣವನ್ನು ಖರ್ಚುಮಾಡಿದ್ದೀರಿ ಎನ್ನತಕ್ಕ ವಿವರಗಳನ್ನು ನಾವು ಸರ್ಕಾರದಿಂದ ಪಡೆಯುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಏಕೆಂದರೆ ಇವತ್ತು ಈ ಸದನ ಮುಂಗಿದು ಹೋಗುತ್ತಿದೆ. ತಮ್ಮ ಹೇಳಿಕೆಯನ್ನು ನಾನು ನೋಡಿದೆ, ಪಂಜಾಬ್ ಮತ್ತು ಹರಿಯಾಣದಿಂದ ಮೇವನ್ನು ತರಿಸುವ ವಿಚಾರದಲ್ಲಿ ತಾವು ಪ್ರಸ್ತಾಪ ಮಾಡಿದ್ದೀರಿ. ಕೇಂದ್ರ ಸರ್ಕಾರಕ್ಕೆ ನೀವು ಅಭಿನಂದನೆಯನ್ನು ಸಲ್ಲಿಸಿದ್ದೀರಿ ಆದರೆ ಒಂದು ವಿಚಾರವನ್ನು ನೀವು ನಿಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಪಂಜಾಬ್ ಮತ್ತು ಹರ್ಯಾಣದಿಂದ ಇದುವರೆಗೆ ಎಷ್ಟು ಮೇವನ್ನು ತರಿಸಿದ್ದಿರಿ ? ಅದಕ್ಕೆ ರೈಲ್ವೇ ರಿಯಾಯಿತಿ ಏನಾದರೂ ಸಿಕ್ಕಿದೆಯೆ ? ಅಥವಾ ರಾಜ್ಯಸರ್ಕಾರದ ಬೊಕ್ಕಸದಿಂದ ಏನಾದರೂ ಹಣ ಖರ್ಚಾಗಿದೆಯೆ ? ಅಲ್ಲಿಂದ ಬಂದಂಥ ಮೇವನ್ನು ಯಾವ ಯಾವ ಭಾಗಗಳಿಗೆ ಎಷ್ಟೆಷ್ಟು ಕಳುಹಿಸಿಕೊಟ್ಟಿದ್ದೀರಿ ? ಎಂಬುದನ್ನು ತಿಳಿಸಬೇಕು ನಾನು ಏತಕ್ಕೆ ಹೀಗೆ. ಕೇಳುತ್ತಿದ್ದೇನೆಂದರೆ ರಾಯಚೂರು, ಬಳ್ಳಾರಿ, ಬೆಳಗಾಂ, ಜಿಲ್ಲೆಗಳಲ್ಲಿ ಮೇವಿಗೋಸ್ಕರ ಆಫ್ರಿಕನ್ ಜೋಳದ ಬೀಜವನ್ನು ಹಾಕಿಸಿದ್ದೀರಿ. ಆದರೆ ಆ ಭಾಗದ ಜನರಿಂದ ನನಗೆ ಬಂದಿರತಕ್ಕ ಮಾಹಿತಿಯ ಪ್ರಕಾರ ಆ ಜೋಳ ಏನು ಮೊಳಕೆ ಬಂದಿದೆ ಅದು ನೀರಿಲ್ಲದೆ ಅಷ್ಟಕ್ಕೆ ಒಣಗಿಹೋಗಿದೆ ಬಹಳ ಶೀಘ್ರವಾಗಿ ಬೆಳೆಯಂತಕ್ಕ ಈ ತಳಿ ಅದು ಆಫ್ರಿಕನ್ ಜೋಳದ ತಳಿ ಇರಬಹುದು ಅಥವಾ ಬೇರೆ ತಳಿ ಇರಬಹುದು ಅದಕ್ಕೆ ಕೃಷಿ ಇಲಾಖೆಯು ಸಹಾಯವನ್ನು ಪಡೆದು ಮೇವನ್ನು ಶೀಘ್ರವಾಗಿ ಬೆಳೆಯುತ್ತೇವೆಂದು ತಾವು ಹೇಳಿದ್ದೀರಿ. ಅದಷ್ಟೋ ಹೆಕ್ಟಾರ್‌ನಲ್ಲಿ ಈ ಬೀಜವನ್ನು ಹಾಕಿಸಿದ್ದೀರಿ. ನಿಮ್ಮ ಪ್ರಕಾರ ಈಗ ಎಷ್ಟು ಮೇವು ಸಿದ್ಧವಾಗಿದೆ ? ಎಷ್ಟು ಬೀಜ ಖರ್ಚಾಗಿದೆ ಎನ್ನತಕ್ಕ ಬಗ್ಗೆ ಕಳೆದ ಸುಮಾರು 1-1½ ತಿಂಗಳಿನಿಂದ ಈಚಿನ ವಿವರವನ್ನು ಹೇಳಬೇಕು. ನಾವು ಡಿಸೆಂಬರ್ ಅಥವಾ ಜನವರಿ ತಿಂಗಳಲ್ಲಿ ಆ ಭಾಗಗಳಲ್ಲಿ ಪ್ರವಾಸ ಹೋದಾಗ ಈಗಾಗಲೇ ನಾವು ಈ ಮೇವಿನ ಬೀಜವನ್ನು ಹಾಕಿದ್ದೇವೆಂದು ನಿಮ್ಮ ಅಧಿಕಾರಿಗಳು ಹೇಳಿದ್ದರು. ನಾನು ಜಿಲ್ಲಾಮಟ್ಟದಲ್ಲಿ ಇರತಕ್ಕ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ, ತಾಲ್ಲೂಕು ಮಟ್ಟದಲ್ಲಿರತಕ್ಕ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ, ಸಬ್ ಡಿವಿಜನ್ ಮಟ್ಟದಲ್ಲಿರತಕ್ಕ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ ಅವರೆಲ್ಲರೂ ಇದೇರೀತಿ ಹೇಳಿದ್ದಾರೆ.

ಎಷ್ಟು ಮೇವು ನಿಮಗೆ ಸಿಕ್ಕಿದ್ದುದು ಬರೀ ಬೀಜವನ್ನು ನೀವು ತೆಗೆದುಕೊಂಡು ಹೋದರೆ ಮೇವು ಸಿಗುವುದಿಲ್ಲ. ಅದು ಬೆಳೆಯುತ್ತದೆಯೋ ಇಲ್ಲವೋ ನೋಡಬೇಕು. ಉದಾಹರಣೆಗೆ, ಗೋಕಾಕ್ ಸವದತ್ತಿ ಎಂದು ಕಾಣುತ್ತದೆ ಅಲ್ಲಿ ಮಂಥಕ್ಕೆ ಸೇರಿರತಕ್ಕಂಥ ಜಾಗ. ಅಲ್ಲಿ ಹೋಗಿ ಬೀಜ ಹಾಕಿಬಿಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದಿರಿ. ಅಲ್ಲಿ ಎಷ್ಟು ಮೇವು ಬಂದಿದೆ ಎಂಬುದರ ಬಗ್ಗೆ ಪ್ರತಿಯೊಂದು ಫಾರಮ್‌ಗೂ ಹೋಗಬೇಕೆಂದು ಹೇಳುತ್ತಿಲ್ಲ, ಬರಗಾಲ ಪ್ರದೇಶಗಳಲ್ಲಿ ಬೀಜ ಹಾಕಿದ್ದೇವೆಂದು ಹೇಳಿದರಲ್ಲ ಅಲ್ಲಿ ಎಷ್ಟು ಮೇವು ಸಿಕ್ಕಿದೆ? ಯಾವ ಯಾವ ಪ್ರದೇಶಗಳಿಗೆ ಅದನ್ನು ಕಳುಹಿಸಿಕೊಟ್ಟಿದ್ದೀರಿ? ಅದರ ಅಂಕಿ ಅಂಶಗಳನ್ನು ಜಿಲ್ಲಾ ಮಟ್ಟದಲ್ಲಿ ಹೇಳಿದರೆ ಸಾಕು. ಪಂಜಾಬ್ ಹರಿಯಾಣದಿಂದ ಎಷ್ಟು ಫಾರ್ ಬಂದಿದೆ? ಎಷ್ಟು ಬೇಕಾಗುತ್ತದೆ ಮುಂತ್ತೆ ಬರತಕ್ಕಂಥ ವ್ಯವಸ್ಥೆ ಮಾಡಿದ್ದೀರಾ ಎಂದು ಕೇಳುತ್ತೇನೆ? ಇತ್ತೀಚೆಗೆ ಪತ್ರಿಕೆಗಳ ಜೊತೆಯಲ್ಲಿ ತಾವು ಈ ವಿಚಾರದಲ್ಲಿ ಮಾತನಾಡಿದ್ದೀರಿ. ನಾವು ನೋಡಿದ ಹಾಗೆ ಮೇವಿನ ಬಗ್ಗೆ ಯಾವುದೇ ವಿಚಾರ ಪ್ರಸ್ತಾಪಕ್ಕೆ ಬರುತ್ತಿಲ್ಲ. ಸರ್ಕಾರದವರು ಎಲ್ಲಿ ದನಕರುಗಳು ಸಾಯುತ್ತಿರುತ್ತವೆ, ಉದಾಹರಣೆಗೆ ಬಳ್ಳಾರಿ, ಜಿಲ್ಲೆಯನ್ನು ತೆಗೆದುಕೊಂಡರೆ, ತೋರಣಗಲ್ ಬಗ್ಗೆ ಮಾನ್ಯ ಭೂಪತಿಯವರು ಉತ್ತರ ಕೊಟ್ಟು ಭಾಷಣ ಮಾಡಿದರು, ತೋರಣಗಲ್, ಸಂಡೂರು ತಾಲ್ಲೂಕು ಹೊಸಪೇಟೆ ತಾಲ್ಲೂಕು ಮುತ್ತು ಬರಗಾಲಕ್ಕೆ ತುತ್ತಾಗಿರುವ ಬಿಜಾಪುರ ಜಿಲ್ಲೆ ಅದರಲ್ಲಿ ಹಾಕಿರತಕ್ಕಂಥದ್ದನ್ನು ಮೊದಲೇ ಹೇಳಿದ್ದೇನೆ. ಇಂಥ ಭಾಗಗಳಲ್ಲಿ ಮೇವನ್ನು ಕಳುಹಿಸುವ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಹಳೇ ಹೇಳಿಕೆಯನ್ನು ಮತ್ತೊಮ್ಮೆ ಪುನರಾವರ್ತನೆ ಮಾಡಲಿಕ್ಕೆ ಹೋದರೆ ಸುಮ್ಮನೆ ಕಾಲವ್ಯಯಮಾಡಿದಂತಾಗುತ್ತದೆ. ಉದ್ದೇಶ ಇರಬಹುದು, ಲೇಟೆಸ್ಟ್ ಅಂಕಿ ಅಂಶಗಳು ಎಷ್ಟು ನಿಮಗೆ ಬಂದಿದೆ, ಖರ್ಚಾದುದು ಏನು, ಉಳಿದ ಪ್ರದೇಶಗಳಲ್ಲಿ ಹ್ರಯತ್ನ ಮಾಡಿದ್ದೀರಾ ಎಂದು ತಿಳಿಸಬೇಕು. ಜನರಲ್ ಆಗಿ ಕೇಂದ್ರ ಸರ್ಕಾರದಿಂದ ಹಣ ಬಂದಿಲ್ಲವಾದ್ದರಿಂದ ಬಹಳ ಖೇದವಾಗುತ್ತದೆಂದು ನಿಮ್ಮ ಹೇಳಿಕೆಯಲ್ಲಿ ಹೇಳಿರುತ್ತೀರಿ. ಕೇಂದ್ರ ಕೃಷಿ ಮಂತ್ರಿ ಹಣಕಾಸಿನ ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳಿಗೂ ಮನವಿ ಮಾಡಿಕೊಂಡರೂ ಕೂಡ ವಿಳಂಬ ಮಾಡುತ್ತಿರುತ್ತಾರೆ. ಇದರಿಂದ ಬಹಳ ವಿಷಾದವಾಗುತ್ತದೆಂದು ಹೇಳಿದ್ದೀರಿ. ವಿಶಾದವನ್ನು ವ್ಯಕ್ತಪಡಿಸುವುದು ಇರಲಿ,

ಧನಕರುಗಳು ಸಾಯುತ್ತಿರತಕ್ಕಂಥ, ಜನರು ಸಾಯುತ್ತಿರತಕ್ಕಂಥ ಸಂದರ್ಭದಲ್ಲಿ ತಮ್ಮನ್ನು ಒಂದು ಪ್ರಶ್ನೆ ಕೇಳುತ್ತಿದ್ದೇನೆ. ಅದಕ್ಕಾಗಿ ಸುಮಾರಾಗಿ ತಮ್ಮ ಹೇಳಿಕೆಯಲ್ಲಿ ಹೊಸ ವಿಚಾರಧಾರೆ ಏನಾದರೂ ಇದೆಯೇ ಎಂದು ನೋಡಿದರೆ, ಇವೊತ್ತು ನಮ್ಮ ಸರ್ಕಾರದಿಂದ ೫೫.೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದುದರಲ್ಲಿ ೪೨.೪೫ ಕೋಟಿ ರೂಪಾಯಿಗಳು ಕೇಂದ್ರದಿಂದ ಬಂದಿದೆ. ಉಳಿದ ಬಾಕಿ ಹಣ ಕೇಂದ್ರದಿಂದ ಬಂದಿಲ್ಲ ಎಂದೂ ಕೂಡ ಹೇಳಿದ್ದೀರಿ. ಕೇಂದ್ರ ಸರ್ಕಾರದ ಕೃಷಿ ಅಧ್ಯಯನ ತಂಡದವರು ಬಂದು ಹೋದ ಮೇಲೆ ಅವರು ಕೂಡ ವರದಿಯನ್ನು ಕೊಟ್ಟಿದ್ದಾರೆಂದು ಹೇಳಿದ್ದೀವೆ. ಇವೊತ್ತು ಹಣವನ್ನು ಕೊಡತಕ್ಕಂಥ ವಿಚಾರದಲ್ಲಿ ಈಗಾಗಲೇ ನನಗೆ ಬಂದಿರತಕ್ಕಂಥ ವಿಚಾರದಲ್ಲಿ ಬರಗಾಲ ಪೀಡಿತ ಪ್ರದೇಶಗಳನ್ನು ನೋಡುವುದಕ್ಕೋಸ್ಕರವಾಗಿ, ಕೇಂದ್ರ ಸರ್ಕಾರದ ಕೃಷಿ ಸಚಿವರಾದ ಶ್ರೀಮಾನ್ ಭೂಪಾಸಿಂಗ್‌ರವರನ್ನು ಕಳುಹಿಸಿಕೊಟ್ಟಿರುತ್ತಾರೆ. ಈಗಾಗಲೇ ಅವರು ಬಂದು ಹೋಗಿದ್ದಾರೆ. ಮತ್ತೊಂದು ಸಾರಿ ಬರುತ್ತಾರೆನ್ನುವ ವಿಚಾರವಿದೆ. ಅವರ ಬರುವಿಕೆಗೆ ಆಹ್ವಾನ ಕೊಡುತ್ತೇವೆಂದು ಶ್ರೀಮಾನ್ ಬೊಮ್ಮಾಯಿಯವರು ತಿಳಿಸಿದ್ದಾರೆ. ಇತ್ತೀಚಿನ ವರದಿ ಪ್ರಕಾರ ಬಿಜಾಪುರ ಡಿಸ್ಟ್ರಿಕ್ಟ್ ಸತತವಾಗಿ ಬರಗಾಲ ಬೀಳತಕ್ಕಂಥ ಮಂಡಿಗೋಡನ್ನು ಉದಾಹರಣೆಗೆ ತೆಗೆದುಕೊಂಡರೆ, ಗದಗ್ ರೋಣಾ ತಾಲ್ಲೂಕಿನ ಒಂದು ಭಾಗ ಇದು ತವಂಗೆಲ್ಲ ಗೊತ್ತಿದೆ. ಸತತವಾಗಿ ಬರಗಾಲಕ್ಕೆ ತುತ್ತಾಗತಕ್ಕಂಥ ಭಾಗಗಳಂ ಇದು ಇರಬಹುದು. ಸತತವಾಗಿ ಬರಗಾಲ ಬೀಳತಕ್ಕಂಥ ಪ್ರದೇಶಗಳಿಗೋಸ್ಕರವಾಗಿ ಕೇಂದ್ರ ಸರ್ಕಾರದವರು ಒಂದಂ ದೊಡ್ಡ ಯೋಜನೆಯನ್ನು ಹಾಕಿಕೊಂಡಿರುತ್ತಾರೆ. ಕರ್ನಾಟಕವು ಸೇರಿದಂತೆ ಅಖಂಡ ಭಾರತ ದೇಶದಲ್ಲಿ ಎಲ್ಲೆಲ್ಲಿ ಸತತವಾಗಿ ಬರಗಾಲ ಬೀಳತಕ್ಕಂಥ ಪ್ರದೇಶಗಳು ಇವೆ, ಆ ಪ್ರದೇಶಗಳಲ್ಲಿ ಒಂದು ದೊಡ್ಡ ಶಾಶ್ವತವಾದ ಯೋಜನೆಯನ್ನು ಮಾಡಬೇಕೆಂದು ಕೇಂದ್ರ ಸರ್ಕಾರದವರ ವಿಚಾರ ಇರತಕ್ಕಂಥದ್ದು ನಮಗೆ ಈಗಾಗಲೇ ಗೊತ್ತಿದೆ. ಈ ವಿಚಾರವಾಗಿ ಕೇಂದ್ರ ಗೃಹ ಸಚಿವರಂ ಇಲ್ಲಿಗೆ ಬಂದಾಗ ಅದನ್ನು ಪ್ರಕಟಣೆ ಮಾಡಬಹುದು. ಮಂತ್ರಿ ನನಗೆ ಬಂದಿರುವ ವರದಿ ಪ್ರಕಾರ ಮುಂದಿನ ತಿಂಗಳು ಪ್ರಧಾನ ಮಂತ್ರಿಗಳು ಕೂಡ ನಮ್ಮ ಕರ್ನಾಟಕದಲ್ಲಿ ಬಿದ್ದಿರತಕ್ಕಂಥ ಬರಗಾಲ ಪ್ರದೇಶಗಳಿಗೆ ಭೇಟಿ ಕೊಡತಕ್ಕಂಥ ವಿಚಾರ ಕೂಡ ಇದೆ. ಆಂಧ್ರದ ಕೆಲವು ಭಾಗಗಳು, ಕರ್ನಾಟಕದ ಕೆಲವು ಭಾಗಗಳಿಗೆ ಅವರು ಭೇಟಿಕೊಡತಕ್ಕಂಥ ವಿಚಾರವನ್ನು ಇಟ್ಟುಕೊಂಡಿದ್ದಾರೆಂದು ಕೇಳಿದ್ದೇನೆ. ಹಾಗೆ ಬಂದಾಗ ಈ ಬಗ್ಗೆ ಅವರು ಪ್ರಕಟಣೆ ಇಲ್ಲೇ ಮಾಡುತ್ತಾರೋ ಅಥವಾ ಪಾರ್ಲಿಮೆಂಟಿನಲ್ಲಿ ಮಾಡುತ್ತಾರೋ ಗೊತ್ತಿಲ್ಲ. ಭೀಕರ ಬರಗಾಲ ಬಿದ್ದಿರತಕ್ಕಂಥ ಪ್ರದೇಶಗಳಿಗೆ ಶಾಶ್ವತ ಪರಿಹಾರವನ್ನು ನಾವು ಯಾವರೀತಿ ಮಾಡಬೇಕು ಎನ್ನುವ ವಿಚಾರಧಾರೆಯ ಒತ್ತಡ ಏನು ಇದೆ ಆ ಒತ್ತಡಕ್ಕೆ ಅನುಗುಣವಾಗಿ ಕೇಂದ್ರ ಸರ್ಕಾರದವರು ಯೋಜನೆಯನ್ನು ತಯಾರು ಮಾಡುತ್ತಾರೆನ್ನುವ ವಿಚಾರವನ್ನು ನಾನು ಕೇಳಿದ್ದೇನೆ. ಇದು ಕೆಂದ್ರ ಸರ್ಕಾರಕ್ಕೆ ಬಿಟ್ಟಿರತಕ್ಕಂಥ ವಿಚಾರ. ಒತ್ತಡವಂತೂ ನಾವು ನೀವು ಸೇರಿ ಮಾಡಿದ್ದೇವೆ. ಕೇಂದ್ರ ಸರ್ಕಾರದಿಂದ ಶಾಶ್ವತವಾದ ಪರಿಹಾರ ಸಿಕ್ಕತಕ್ಕಂಥ ವಿಚಾರದಲ್ಲಿ ನೂರಾರು ಕೋಟಿ ಸಾವಿರಾರು ಲಕ್ಷ ರೂಪಾಯಿಗಳ ಹಣ ರಾಷ್ಟ್ರದ ಯಾವಯಾವ ಭಾಗಗಳಿಗೆ ತೊಂದರೆಯಾಗಿದೆ ಅಲ್ಲೆಲ್ಲಾ ಏರ್ಪಾಡು ಮಾಡುವ ಬಗ್ಗೆ ಒತ್ತಡ ಇದೆ. ಈ ಮಧ್ಯೆ ತಾವು ಏನು ಹೇಳಿದ್ದೀರಿ? ಕೇಂದ್ರ ಸರ್ಕಾರ ಹಣವನ್ನು ಕೊಡಲಿ ಬಿಡಲಿ ನಾವು ಖರ್ಚು ಮಾಡುತ್ತೇವೆಂದು ದಿವಸಕ್ಕೆ ಒಂದು ಕೋಟಿ ರೂಪಾಯಿಗಳನ್ನು ಆದರೂ ಖರ್ಚು ಮಾಡಂತ್ತೇವೆಂದು ಹೇಳಿದ್ದೀರಿ. ನಿಮ್ಮ ಹತ್ತಿರ ದಿವಸಕ್ಕೆ ಒಂದು ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡಲು ಎಲ್ಲಿ ಹಣ ಇದೆ? ನನಗೆ ತಿಳಿದ ಮಟ್ಟಿಗೆ ಎನ್‌ಆರ್‌ಇಪಿ, ಡಿಪಿಎಪಿ, ಆರ್‌ಎಲ್‌ಇಜಿಪಿ ಈ ಎಲ್ಲಾ ಕಾರ್ಯಕ್ರಮದ ಹಣವನ್ನು ಸೇರಿಸಿ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಮಾನ್ಯ ಬೊಮ್ಮಾಯಿಯವರು ಹೇಳಿದರೆ, ಈ ದೇಶದ ಜನರು ಏನು ತಿಳಿದುಕೊಳ್ಳಬಹುದಂ. ಕರ್ನಾಟಕ ರಾಜ್ಯದಲ್ಲಿ ತೆರಿಗೆದಾರರು ನಮ್ಮದು ಹಣ ಎಂದು ತಿಳಿದುಕೊಳ್ಳಬಹುದು. ನಾವು ಒಂದು ಕೋಟಿ ರೂಪಾಯಿಯನ್ನು ಖರ್ಚು ಮಾಡುವುದು ನಿಜ ವಿದ್ದರೆ, ಸುಮಾರು ೫೦ ಲಕ್ಷ ಖರ್ಚು ಮಾಡುತ್ತೀರೆಂದು ಇಟ್ಟುಕೊಳ್ಳೋಣ. ಅಥವಾ ಎರಡು ಕೋಟಿ ಖರ್ಚು ಮಾಡುತ್ತೀರೆಂದು ಇಟ್ಟುಕೊಳ್ಳೋಣ. ಇದರಲ್ಲಿ ಕೇಂದ್ರ ಸರ್ಕಾರದ್ದು ಹಣ ಎಷ್ಟು ಎನ್ನುವ ಮಾತನ್ನು ಹೇಳತಕ್ಕಂಥ ವಿಚಾರಧಾರೆಯನ್ನು ನೀವು ಮಾಡಲಿಲ್ಲ. ತಾವು ತಿಳಿದಹಾಗೆ ಕರ್ನಾಟಕ ರಾಜ್ಯದ ಜನರೂ ದಡ್ಡರಲ್ಲ. ಎನ್‌ಆರ್‌ಇಪಿ ಆರ್‌ಎಲ್‌ಇಜಿಪಿ ಬಿಪಿಎಪಿಗೆ ಬರುವ ಹಣ ಕೇಂದ್ರ ಸರ್ಕಾರದ್ದು ೫೦ ಪರ್ಸೆಂಟ್ ಇರುತ್ತದೆ. ಕುಡಿಯುವ ನೀರಿನ ವಿಚಾರವನ್ನು ನೀವು ಪ್ರಸ್ತಾಪ ಮಾಡಿದ್ದೀರಿ. ಎಷ್ಟು ಹಣ ಬಂದಿದೆ ಎಷ್ಟು ಹಣ ಬಿಟ್ಟಿದೆ ಅದರ ವಿವರಕ್ಕೆ ಈ ಸಂದರ್ಭದಲ್ಲಿ ಹೋಗುವುದಿಲ್ಲ.

ಆದರೆ ಕೇಂದ್ರ ಸರ್ಕಾರದವರು ಹಣ ಕೊಟ್ಟಿಲ್ಲ, ಕೊಟ್ಟಿಲ್ಲವೆಂದು ಹೇಳುತ್ತೀರೇ ವಿನಃ ಕೊಟ್ಟಿರತಕ್ಕಂಥ ಹಣವನ್ನು ಸದುಪಯೋಗ ಮಾಡಿಕೊಳ್ಳುತ್ತೇವೆ ಎನ್ನುವ ವಿಚಾರದ ಬಗ್ಗೆ ಒಂದು ಮಾತನ್ನು ನೀವು ಹೇಳಲಿಲ್ಲ. ನಿಮ್ಮ ಕಾರ್ಯಕ್ರಮದಲ್ಲಿ ದುರುಪಯೋಗಪಡಿಸಿಕೊಳ್ಳತಕ್ಕಂಥದ್ದಕ್ಕೆ ಚೆನ್ನಾಗಿ ನಡೆಸಿದ್ದೀರಿ. ಬಂದಿರತಕ್ಕಂಥ ಹಣ ರಾಜ್ಯದ್ದೇ ಇರಬಹುದು, ಅಥವಾ ಕೇಂದ್ರ ಸರ್ಕಾರದ್ದೇ ಇರಬಹುದು ಆ ಹಣವನ್ನು ದುರುಪಯೋಗಪಡಿಸಿಕೊಳ್ಳಲಿಕ್ಕೆ ಬಿಡುವುದಿಲ್ಲ. ಮತ್ತೆ ಅಡ್ಮಿನಿಸ್ಟ್ರೇಷನ್‌ನನ್ನು ಸ್ಟ್ರೀಮ್‌ಲೈನ್ ಮಾಡಿದ್ದೇವೆ, ಕಂಟ್ರೋಲ್ ಮಾಡುತ್ತೇವೆ ಎನ್ನುವ ವಿಚಾರದ ಬಗ್ಗೆ ನಿಮ್ಮ ಮಾತಿನಲ್ಲಿ ಏನೂ ಹೇಳಿಲ್ಲ. ತಿನ್ನುವವರು ತಿನ್ನುತ್ತಲೇ ಇರುತ್ತಾರೆ. ಧಾರವಾಡ ಜಿಲ್ಲೆಯಲ್ಲಿ, ಶಿವಮೊಗ್ಗ ಬಿಜಾಪುರ ಜಿಲ್ಲೆಯಲ್ಲಿ ತಿನ್ನುವುದಕ್ಕೋಸ್ಕರವಾಗಿಯೇ ಜನ ಹುಟ್ಟಿರುತ್ತಾರೆ. ಆದರೆ ಯಾವುದೇ ಹಣ ಈ ರೀತಿ ಪೋಲಾಗುತ್ತಿದೆ ಎನ್ನುವ ವಿಚಾರವನ್ನು ಕೊಡಬೇಕಾಗಿತ್ತು. ಬರೀ ಕೇಂದ್ರ ಸರ್ಕಾರದಿಂದ ಹಣ ತರಿಸಬೇಕೆಂದು ಹೇಳಿಕೆಯನ್ನು ದಿನನಿತ್ಯ ಮಾಡುವುದು ನಿಮ್ಮಿಂದ ಬರುತ್ತಿರುವುದು ಏನು ತೋರಿಸುತ್ತದೆಂದರೆ ತಮ್ಮಲ್ಲಿ ಇವೊತ್ತಿಗೂ ಕೂಡ ಸರಿಯಾದ ಅಂಕಿಅಂಶಗಳು ಇಲ್ಲವೆಂದು ಹೇಳತಕ್ಕಂಥ ತೀರ್ಮಾನಕ್ಕೆ ನಾನು ಬರಬೇಕಾಗುತ್ತದೆ. ಅಥವಾ ಅದು ಕೂಡ ಜಸ್ಟಿಫೈ ಮಾಡುವುದಕ್ಕೆ ಅಸಾಧ್ಯ ಎನ್ನುವ ವಿಚಾರಕ್ಕೆ ಬರಬೇಕಾಗುತ್ತದೆನ್ನುವ ಪ್ರಶ್ನೆ ಪ್ರತ್ಯೇಕ. ಕರ್ನಾಟಕ ರಾಜ್ಯದಲ್ಲಿ ಸುಮಾರು ೧೯ ಜಿಲ್ಲೆಗಳಲ್ಲಿ, ೧೫೮ ತಾಲ್ಲೂಕುಗಳಲ್ಲಿ ೨೯,೯೧೫ ಗ್ರಾಮಗಳು ಸುಮಾರು ಹತ್ತಿರ ಹತ್ತಿರ ೨೫ ಸಾವಿರ ಗ್ರಾಮಗಳಲ್ಲಿ ಇರತಕ್ಕಂಥ ಪರಿಸ್ಥಿತಿಯನ್ನು ಎದುರಿಸಲು ನಮ್ಮ ಜನರಿಗೆ ಉದ್ಯೋಗ ಕೊಡಿಸುತ್ತೇವೆ ಎಂದು ನಿಮ್ಮ ಪಕ್ಷದವರು ನಮ್ಮ ಪಕ್ಷದವರು ಹೋಗಿ ಬರೋಣ. ನಾವು ನೀವು ಸೇರಿ ಶಾಸಕರನ್ನು ಕೇಳೋಣ. ತಮ್ಮಿಂದ ಎಷ್ಟು ಜನರಿಗೆ ಉದ್ಯೋಗ ಕೊಡಲಿಕ್ಕೆ ಸಾಧ್ಯವಾಗುತ್ತದೆ ಸ್ವಾವಿಂ. ಸಾಮಾನ್ಯವಾಗಿ ಹೇಳಿಕೆಯನ್ನು ನೀಡುತ್ತಿರುವುದರ ಬಗ್ಗೆ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎಂ. ನಾರಾಯಣ ಕುಮಾರ್.— ಮಾನ್ಯ ಅಧ್ಯಕ್ಷರೇ ನನ್ನದೊಂದು ಕ್ರಿಯಾಲೋಪ. ಮಾನ್ಯ ಬಂಗಾರಪ್ಪನವರು ಹೇಳುವ ಅರ್ಥದಲ್ಲಿ ಸಂಪೂರ್ಣವಾಗಿ ಕೇಂದ್ರ ಸರ್ಕಾರದವರೇ ಎಲ್ಲಾ ಸೌಲಭ್ಯ ಕೊಡುತ್ತಾ ಇದ್ದಾರೆ, ಕೇಂದ್ರ ಸರ್ಕಾರದ ಹಣದಿಂದಲೇ ರಾಜ್ಯಸರ್ಕಾರ ನಡೆಯುತ್ತಿದೆ ಎನ್ನುವ ಅರ್ಥದಲ್ಲಿ ಹೇಳುತ್ತಿದ್ದಾರೆ. ಒರೀ ಹೆಗ್ಗಳಿಕೆಯಿಂದ ಹೇಳತಕ್ಕಂಥ ಮಾತಲ್ಲ. ಬರಗಾಲ ಬಿದ್ದಿರುವ ತಾಲ್ಲೂಕುಗಳನ್ನು ನೋಡಿ ಎಲ್ಲೆಲ್ಲಿಗೆ ಎಷ್ಟು ಹಣವನ್ನು ಕೊಡಲಿಕ್ಕೆ ಸಾಧ್ಯವೋ ಅಷ್ಟು ಹಣವನ್ನು ಕೊಟ್ಟು ಪರಿಹಾರ ಮಾಡಿದ್ದೇವೆ. ಬರೀ ಕೇಂದ್ರ ಸರ್ಕಾರವನ್ನು ರಾಜ್ಯ ಸರ್ಕಾರ ನಂಬಿಕೊಂಡಿಲ್ಲ.

(ಗೊಂದಲ)

ಅಧ್ಯಕ್ಷರು.—ಏಪರು ಮಾನ್ಯ ಸದಸ್ಯರು ಹೇಳತಕ್ಕಂಥ ಮಾತಿಗೆ ಗಮನ ಕೊಡಬೇಡಿ. ತಾವು ಹೇಳಿ. ಜಮಾ ಖರ್ಚು ಎಂದರೆ ಗೊತ್ತಾಗುತ್ತದೆ ಆಲ್ಲವೇ?

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ವಿರೋಧ ಪಕ್ಷದ ನಾಯಕರು ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಮುಂಚೆ ನಾನು ಒಂದು ವಿಚಾರ ಹೇಳುತ್ತೇನೆ ಮಾನ್ಯ ವಿರೋಧಪಕ್ಷದ ನಾಯಕರು ಬರಗಾಲ ಪರಿಸ್ಥಿತಿಯ ಬಗ್ಗೆ ಅಂದು ಏನು ಚರ್ಚೆ ಮಾಡಿದರು ಅದನ್ನೇ ಈಗಲೂ ಪ್ರಸ್ತಾಪ ಮಾಡುತ್ತಿದ್ದಾರೆ. ಎಂಟು ತಿಂಗಳ ಹಿಂದೆ ಏನು ಬರಗಾಲದ ಬಗ್ಗೆ ಚರ್ಚೆ ಮಾಡಿದ್ದಾರೋ ಅದೇ ಭಾಷಣವನ್ನು ಅವರು ರಿಪೀಟ್ ಮಾಡುತ್ತಿದ್ದಾರೆ. ದಯವಿಟ್ಟು ಫಾಡರ್ ವಿಷಯದ ಬಗ್ಗೆ ಹಣಕಾಸಿನ ಬಗ್ಗೆ ನಾವು ಕೊಟ್ಟಿರತಕ್ಕಂಥ ಪುಸ್ತಕಗಳನ್ನು ನೋಡಬೇಕು. ಎಲ್ಲಾ ವಿವರಗಳನ್ನು ಕೊಟ್ಟಿದ್ದೇವೆ. ಲೇಟೆಸ್ಟ್ ಫಿಗರ್ಸ್ ಕೊಟ್ಟಿದ್ದೇವೆ. ಪಂಜಾಬಿನಿಂದ ಎಷ್ಟು ತರಿಸುತ್ತೇವೆ, ಎಷ್ಟು ಹಣ ಖರ್ಚು ಮಾಡಿದ್ದೇವೆ ಎನ್ನುವ ಬಗ್ಗೆ ಎಲ್ಲಾ ವಿವರಗಳನ್ನು ಕೊಟ್ಟಿದ್ದೇವೆ.

ಒಂದು ವಾರದ ಹಿಂದೆ ಕಂದಾಯ ಇಲಾಖೆಯ ಬೇಡಿಕೆಗಳಿಗೆ ಉತ್ತರ ಕೊಡುವಾಗ ಹೇಳಿದ್ದೆ ಮತ್ತು ನನ್ನ ಸ್ಟೇಟ್‌ಮೆಂಟ್‌ನಲ್ಲಿ ಕೂಡ ಹೇಳಿದ್ದೇನೆ. ಇತ್ತೀಚಿಗೆ ಫಾಡರ್ ಬಗ್ಗೆ ವಿವರಗಳನ್ನು ಹೇಳಿದ್ದೇನೆ. ಪಂಜಾಬ್‌ನಿಂದ ಎಷ್ಟು ತರಿಸಿದ್ದೇವೆ. ಎಷ್ಟು ಹಣ ಖರ್ಚಾಗಿದೆ ಎಂಬುದರ ಬಗ್ಗೆ ಎಲ್ಲಾ ವಿವರಗಳನ್ನು ಕೊಟ್ಟಿದ್ದೇನೆ. ರಾಜ್ಯದಲ್ಲಿ ಜಿಲ್ಲಾವಾರು ಮೇವು ಬೆಳೆದದ್ದು ಎಷ್ಟು, ರೈತರು ಎಷ್ಟು ಬೆಳೆದಿದ್ದಾರೆ, ಎಷ್ಟು ಹಣ ಕೊಡಬೇಕಾಗುತ್ತದೆ ಎಂಬುದನ್ನು ಹೇಳಿದ್ದೇನೆ. ಈ ಬರಗಾಲ ಪರಿಸ್ಥಿತಿ ಬಗ್ಗೆ ಕೊಟ್ಟಿರಂತಹ ಸಾಹಿತ್ಯ ಏನಿದೆ ಅದನ್ನು ಹಿಂದೆ ಯಾವಾಗಲೂ ಕೊಟ್ಟಿರಲಿಲ್ಲ. ತಾಲ್ಲೂಕು ವೈಸ್, ವಿಲೇಜ್ ವೈಸ್ ವಿವರಗಳನ್ನು ಒದಗಿಸಿಕೊಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ,—ತಾವು ಒದಗಿಸಿಕೊಟ್ಟಿರುವ ಸಾಹಿತ್ಯದ ಮೇಲೆ ಮಾತನಾಡಿದರೂ ಕೂಡ ನೀವು ಹತ್ತು ಪರ್ಸೆಂಟ್ ಸಹ ರೀಚ್ ಆಗಿಲ್ಲ. ನಿಮ್ಮ ಲೆಕ್ಕವನ್ನೇ ತೆಗೆದು ಕೊಂಡರೂ ೯-೧೦ ಲಕ್ಷಕ್ಕಿಂತ ಜಾಸ್ತಿ ಬರುವುದಿಲ್ಲ. ನೀವು ಬೇಕಾದರೆ ನೋಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳಿದ್ದು ಏನೆಂದರೆ, ಮಾನ್ಯ ವಿರೋಧಪಕ್ಷದ ನಾಯಕರು ವಿವರಗಳನ್ನು ಕೊಟ್ಟಿಲ್ಲ ಎಂದರು. ಫಾರ್ಡರ್ ಬಗ್ಗೆ ನಾನು ಹೇಳಿದ್ದೇನೆ. ೨೦ ಸಾವಿರ ಎಕರೆಯಲ್ಲಿ ಮೇವನ್ನು ರೈತರು ಬೆಳೆದಿದ್ದಾರೆ. ನಮ್ಮ ರಾಜ್ಯಕ್ಕೆ ಬೇಕಾದಷ್ಟು ಮೇವು ರೈತರಿಂದ ಸಿಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಅದನ್ನು ನಾನು ನೋಡಿದ್ದೇನೆ.....

ಶ್ರೀ ಎಸ್. ಆರ್. ಬೊಮ್ಮಾಯಿ.—ಡಿಸ್ಟ್ರಿಕ್ಟ್ ವೈಸ್ ರೈತರು ಎಷ್ಟು ಬೆಳೆದಿದ್ದಾರೆ. ಅದನ್ನು ಕೊಳ್ಳತಕ್ಕ ರೇಟ್ ಏನಿದೆ, ಅದರ ವಿವರಗಳನ್ನು ಕೊಟ್ಟಿದ್ದೇನೆ. ೨೦ ಸಾವಿರ ಎಕರೆಯಲ್ಲಿ ರೈತರು ಬೆಳೆದಿದ್ದಾರೆ. ಏಪ್ರಿಲ್ ಮಧ್ಯದಲ್ಲಿ ಮೇವು ಖರೀದಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ರೈತರು ಈಗಾಗಲೇ ಒತ್ತಾಯ ಮಾಡುತ್ತಿದ್ದಾರೆ. ರೇಟ್ ನೋಟಿಫಿಕೇಷನ್‌ನ್ನು ಮಾಡಿದ್ದೇವೆ. ಎಲ್ಲಾ ಮೇವನ್ನೂ ಮೇ ಕೊನೆಯೊಳಗೆ ಹಣಕೊಟ್ಟು ಖರೀದಿ ಮಾಡುತ್ತೇವೆ. ದನಕರುಗಳು ತಿನ್ನತಕ್ಕ ಮೇವನ್ನು ಪಂಜಾಬ್‌ನಿಂದ ತರುವ ಅವಶ್ಯಕತೆ ಇಲ್ಲ. ನಮ್ಮ ರೈತರು ಬೆಳೆದಿದ್ದುದನ್ನು ಕೊಳ್ಳಲಿಕ್ಕೆ ಹತ್ತು ಕೋಟಿ ಬೇಕಾಗುತ್ತದೆ. ಅದನ್ನು ಕೊಳ್ಳುತ್ತೇವೆಂದು ಮಾತು ಕೊಟ್ಟಿದ್ದೇವೆ. ಅಂದರೆ ಸುಮಾರು ಹತ್ತು ಕೋಟಿ ಬೆಲೆಯ ಮೇವನ್ನು ರೈತರು ಬೆಳೆದಿದ್ದಾರೆ. ಅದನ್ನು ಕೊಳ್ಳತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಫಾರ್ಡರ್ ಬ್ಯಾಂಕಾಗಳನ್ನು ಮಾಡುತ್ತಿದ್ದೇವೆ ಯಾವ ರೈತರಿಗೆ ಅದರ ಅವಶ್ಯಕತೆ ಇದೆಯೋ ಅವರಿಗೆ ಅರ್ಧ ಬೆಲೆಗೆ ಅದನ್ನು ಮಾರಾಟ ಮಾಡಬೇಕೆಂದು ನಿಗದಿ ಮಾಡಿದ್ದೇವೆ. ಎಲ್ಲರೂ ಗೋಶಾಲೆಗಳಿಗೆ ಎತ್ತುಗಳನ್ನು ತರಲಿಕ್ಕೆ ಸಾಧ್ಯವಿಲ್ಲ. ಈ ಗೋಶಾಲೆಗಳಿಗೆ ಸಾಕಷ್ಟು ಮೇವನ್ನು ಒದಗಿಸಿಕೊಟ್ಟಿದ್ದೇವೆ. ಪಂಜಾಬಿನಿಂದ ತಂದದ್ದು ೩೫೦ ಟನ್ ಅಕ್ಕಿಯ ತವುಡು. ಅದನ್ನು ತರಲಿಕ್ಕೆ ಟ್ರಾನ್ಸ್‌ಪೋರ್ಟ್ ಖರ್ಚನ್ನು ಕೇಂದ್ರ ಸರ್ಕಾರ ಕೊಡಲಿಕ್ಕೆ ಒಪ್ಪಿಕೊಂಡಿದ್ದಾರೆ ಅಕ್ಕಿ ತವುಡನ್ನು ಎಲ್ಲಾ ಗೋಶಾಲೆಗಳಿಗೆ ಕೊಡುತ್ತಿದ್ದೇವೆ. ದನಕರುಗಳ ಆರೋಗ್ಯ ಕೂಡ ಸುಧಾರಿಸಿದೆ. ನಾನು ಸ್ವತಃ ಹೋಗಿ ನೋಡಿ ಬಂದಿದ್ದೇನೆ. ಈ ವಿಚಾರದಲ್ಲಿ ಮುಚ್ಚಿಡತಕ್ಕಂಥಾದ್ದು ಏನೂ ಇಲ್ಲ.

ಆ ಮೇಲೆ ಎಲ್ಲೆಲ್ಲಿ ಹಣದ ದುರುಪಯೋಗವಾಗಿದೆ ಎಂದು ಹೇಳಿದ್ದಾರೆ, ಅದರ ಬಗ್ಗೆ ಹೇಳಿದ್ದೇನೆ. ನಾನು ಅನೇಕ ಸಲ ಹೇಳಿದ್ದೇನೆ. ಈಗ ಪ್ರಥಮ ಬಾರಿಗೆ ಶಾಸಕರಿಗೆ ಮತ್ತು ಸ್ಕೇರ್‌ಸಿಟಿ ಕಮಿಟಿಗೆ ಅಧಿಕಾರ ಕೊಟ್ಟಿದ್ದೇವೆ. ಇನ್‌ಸ್ಪೆಕ್ಷನ್ ಮಾಡತಕ್ಕದ್ದು, ಮತ್ತು ಎಲ್ಲೆಲ್ಲಿ ಈ ರೀತಿಯಾಗಿದ್ದಿರ್ದರೆ, ಅದರ ಬಗ್ಗೆ ವರದಿ ಮಾಡಿದರೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಅನೇಕ ಸಲ ಹೇಳಿದ್ದೇನೆ. ಎಲ್ಲಾ ಪಕ್ಷದ ಶಾಸಕರು ಇದ್ದಾರೆ. ಆ ಕಡೆಯ ಶಾಸಕರೂ ಇದ್ದಾರೆ. ಅವರಿಗೆ ಸಂಪೂರ್ಣವಾದ ಅಧಿಕಾರ ಇದೆ. ಈ ಬಗ್ಗೆ ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೇವೆ. ಅವರು ಯಾವಾಗ ಬೇಕಾದರೂ ಸರ್‌ಪ್ರೈಸ್ ವಿಸಿಟ್ ಮಾಡಬಹುದು. ಅವರಿಗೆ ವಾಹನಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಅನೇಕ ಶಾಸಕರು ಹೋಗಿ ನೋಡಿಕೊಂಡು ಬಂದಿದ್ದಾರೆ. ರಿಪೋರ್ಟ್‌ನ್ನು ಕೂಡ ಕೊಟ್ಟಿದ್ದಾರೆ. ಅಂತಹ ಸಂದರ್ಭದಲ್ಲಿ ನಾನು ಕೂಡಲೇ ಕ್ರಮ ತೆಗೆದುಕೊಂಡಿದ್ದೇವೆ, ಎಲ್ಲಿಯೇ ಆಪಾದನೆ ಬರಲಿ, ಶಾಸಕರಿಂದ ಬರಲಿ, ಸಾರ್ವಜನಿಕರಿಂದ ಬರಲಿ, ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ. ಇದರ ಬಗ್ಗೆ ನಮ್ಮ ಸರ್ಕಾರ ಹಿಂದುಮುಂದೆ ನೋಡುವುದಿಲ್ಲ.

† ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವಾಗ 'ನಾರಾಯಣಕುಮಾರ್ ಮಾತನಾಡಿದರೆ ಜಮಾಖರ್ಚಿಗೆ ಇಲ್ಲ' ಎಂದು ತಾವು ಹೇಳಿದ್ದೀರಿ. ನಾನೇನೂ ಈ ಸದನಕ್ಕೆ ಕಳ್ಳತನದಿಂದ ಬಂದಿಲ್ಲ. ಜನರಿಂದ ಮತ ಪಡೆದು ಅಧಿಕೃತವಾಗಿ ಸದಸ್ಯನಾಗಿ ಇಲ್ಲಿಗೆ ಬಂದಿದ್ದೇನೆ. ಈ ಸದನದಲ್ಲಿ ಮಾತನಾಡುವ ಹಕ್ಕು ನನಗೆ ಇದೆ. ಜಮಾ ಖರ್ಚು ಎನ್ನತಕ್ಕ ಮಾತಿನ ಅರ್ಥ ಏನು ? ಜಮಾಕ್ಕೆ ಇಲ್ಲ ಎಂದರೆ ಇದು ಏನು ಅರ್ಥವನ್ನು ಕೊಡುತ್ತದೆ ? ಲೆಕ್ಕಕ್ಕೆ ಇಲ್ಲವೆಂದು

ಅರ್ಥವಲ್ಲವೇ ? ಎಂದರೆ ಇಲ್ಲಿಯ ೧೨೪ ಮಂದಿ ಸದಸ್ಯರಲ್ಲಿ ನಾನು ಲೆಕ್ಕಕ್ಕೆ ಇಲ್ಲವೇ ? ಈ ಮಾತನ್ನು ತಾವು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ನಾನು ಮಾತನಾಡಿದ್ದರಲ್ಲಿ ಏನಾದರೂ ತಪ್ಪಿದ್ದರೆ ತಾವು ಹೇಳಿ. ಕೇಂದ್ರ ಸರ್ಕಾರದವರೇನು ಇಲ್ಲಿ ರಾಜ್ಯಾಡಳಿತ ನಡೆಸುತ್ತಿದ್ದಾರೆಯೆ ? ಅವರ ಕೂಡ ಶಾಮೀಲು ಮಾಡುತ್ತಿದ್ದೀರಾ ತಾವು ?

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಈ ಮಲತಾಯಿ ಧೋರಣೆ ಸಲ್ಲದು. ಕೇಂದ್ರ ಸರ್ಕಾರ ಈ ರಾಜ್ಯವನ್ನು ಆಳಂತ್ತಿದೆಯೆ ? ಈ ಮಾತನ್ನು ವಾಪಾಸ್ಸು ತೆಗೆದುಕೊಳ್ಳಬೇಕು.....

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ತಾವು ಶಾಮೀಲಾಗಿದ್ದೀರಿ ಎಂದು ಶ್ರೀ ನಾರಾಯಣಕುಮಾರ್ ಅವರು ನೇರವಾಗಿ ಆಪಾದನೆ ಮಾಡಿದ್ದಾರೆ. ಇದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.—ಮಾನ್ಯ ನಾರಾಯಣಕುಮಾರ್, ಇದು ಸರಿಯಲ್ಲ. ನಾನು ಅವರ ಕಡೆಗೆ ಶಾಮೀಲು ಎಂದು ಇಂತಹ ಪದಗಳನ್ನು ಬಳಸುವುದಾದರೆ, ನಾಳೆಯೇ ನಾನೂ ಈ ಜಾಗವನ್ನು ಬಿಡುತ್ತೇನೆ. ನಾನು ಇಲ್ಲಿ ಶಾಮೀಲಾಗಲಿಕ್ಕೆ ಬಂದಿಲ್ಲ. ಈ ತರಹ ಹುಚ್ಚುಚ್ಚಾಗಿ ಮಾತನಾಡಲಿಕ್ಕೆ ಹೋಗಬಾರದು ನೀವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಮಾತನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಜಿ. ನಾರಾಯಣಕುಮಾರ್.—ನಾನು ಹೇಳಿದ್ದುದು ಜಮಾಖರ್ಚಿಗಿಲ್ಲ ಎಂದರೆ ನನಗೆ ಎಷ್ಟು ನೋವಾಗಬಹುದು ಎಂದು ತಾವು ಯೋಚನೆ ಮಾಡಿದ್ದೀರಾ ? ಹಿಂದಿನ ಬಾಗಿಲಿನಿಂದ ನಾನು ಇಲ್ಲಿಗೆ ಬಂದಿದ್ದೇನೆಯೇ ? ನಿಮ್ಮ ಮನಸ್ಸಿಗೆ ನೋವಾಗಿದ್ದರೆ ಕ್ಷಮಾಪಣೆಯನ್ನು ಕೇಳುತ್ತೇನೆ. ಇದರ ಬಗ್ಗೆ ನನ್ನ ವಿರೋಧ ಇಲ್ಲ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರ ಮೇಲೆ ಯಾವುದೇ ರೀತಿಯಲ್ಲಿ ಆರೋಪಣೆ ಮಾಡ ತಕ್ಕದ್ದು ಯಾವ ಭಾಗದ ಸದಸ್ಯರಿಗೂ ಸರಿಯಾದುದಲ್ಲ. ಆದ್ದರಿಂದ ದಯಮಾಡಿ ಮಾನ್ಯ ನಾರಾಯಣಕುಮಾರ್ ಅವರು ತಮ್ಮ ಕ್ಷಮೆಯನ್ನು ಕೇಳಬೇಕು.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ, ತಾವು ಹಿರಿಯರು, ತಮ್ಮ ಕ್ಷಮಾಪಣೆಯನ್ನು ಕೇಳುತ್ತೇನೆ. ಆದರೆ ನಮ್ಮ ಪರಿಸ್ಥಿತಿ ಏನಾಗಬೇಕು ? ಏಕೆ ತಾವು ಹೀಗೆ ಮಾಡಿದಿರಿ ? ಅದನ್ನು ಹೇಳಿ ತಾವು.

ಅಧ್ಯಕ್ಷರು.—ನಾನು ಆಗಲೇ ಹೇಳಿದ್ದೇನೆ, ಇವರ ಮಾತನ್ನು ಯಾವ ಜಮಾಖರ್ಚಿಗೂ ಹಿಡಿಯುವುದು ಬೇಡ ಎಂದು.

ಶ್ರೀ ಜಿ. ನಾರಾಯಣಕುಮಾರ್.—ನಿಮಗೆ ಅನುಮಾನ ಏಕೆ ? ನನಗೆ ಸ್ವಶಕ್ತಿ ಇದೆ. ನಾನು ಕನ್ನಡ ಚಳುವಳಿಯ ಹೋರಾಟಗಾರ. ಈ ರಾಜ್ಯದ ನಾಲ್ಕು ಕೋಟಿ ಜನತೆಯ ಆಶೀರ್ವಾದದಿಂದ ಯಾವುದೇ ಕ್ಷೇತ್ರದಿಂದ ಬೇಕಾದರೂ ಗೆದ್ದು ಬರುತ್ತೇನೆ. ಇದನ್ನು ಕಾಂಗ್ರೆಸ್ಸಿನವರು ಒಪ್ಪಿಕೊಳ್ಳುತ್ತಾರೆಯೇ ?

೪-೪೦ ಪಿ.ಎಂ.

ನಾನು ನಮ್ಮ ರಾಜ್ಯದ ೧೯ ಜಿಲ್ಲೆಗಳ ಪೈಕಿ ಎಲ್ಲಿ ಬೇಕಾದರೂ ಚುನಾವಣೆಗೆ ನಿಂತು ಗೆಲ್ಲುತ್ತೇನೆ. ಆದ್ದರಿಂದ ಇಲ್ಲಿ ನನ್ನ ಮಾತಿಗೆ ಜಮಾ ಖರ್ಚು ಒಂದೂ ಇಲ್ಲ ಎಂದು ಹೇಳುವುದಕ್ಕೆ ಬದಲು ತಾವು ಆ ಕಡೆಯವರಿಗೆ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಕಂದಾಯ ಇಲಾಖೆ ಮೇಲಿನ ಬೇಡಿಕೆಗಳಂ ಇಲ್ಲಿ ಚರ್ಚೆಗೆ ಬಂದಾಗ ಸಹ ಈ ವಿಚಾರ ಪ್ರಸ್ತಾಪಕ್ಕೆ ಬಂದಿತ್ತು. ಪಂಜಾಬ್ ಮಂತ್ತು ಹರಿಯಾಣದಿಂದ ಮೇವನ್ನು ತರಿಸುವುದನ್ನು ನಿಲ್ಲಿಸಿದ ಮೇಲೆ ಇಲ್ಲಿಯ ಪರಿಸ್ಥಿತಿ ಏನಾಯಿತು ಎಂಬ ಬಗ್ಗೆ ನಾನು ಕೇಳಿದೆ. ಏಕೆಂದರೆ, ತಾವು ಸರಕಾಲದಲ್ಲಿ ಕೊಳ್ಳದಿರುವ ಕಾರಣ ಬೆಳೆದಂಥ ಮೇವು ಒಣಗಿದೆ. ನಮ್ಮ ರಾಜ್ಯದ ಅನೇಕ ಜನ ರೈತರು ಮೇವನ್ನು ಬೆಳೆಸಿದ್ದಾರೆ ಮತ್ತು ಸರ್ಕಾರದ ಇಲಾಖಾ ಫಾರಂಗಳ ಮೂಲಕವೂ ಬೆಳೆಸಿದ್ದೀರಿ. ಈಗ ರೈತರು ಏನು ಬೆಳೆದಿದ್ದಾರೆ, ಅದನ್ನು ಕೊಳ್ಳಲು ಸುಮಾರು ಹತ್ತು ಕೋಟಿ ರೂಪಾಯಿಗಳಂ ಬೇಕಾಗುತ್ತದೆಂದು ಹೇಳಿದ್ದಿರಿ ಒಂದು ಸಾವಿರ ಎಕರೆಯಲ್ಲಿ ಆಫ್ರಿಕನ್ ಮೇವನ್ನು ಬೆಳೆದರೆ ಎಷ್ಟು ಟನ್ ಮೇವು ಉತ್ಪಾದನೆ ಆಗುತ್ತದೆಂದು ನಾನು ಕೇಳಿದ್ದೆ. ಅದಕ್ಕೆ ತಾವು ಉತ್ತರ ಕೊಡಲಿಲ್ಲ. ಕಂದಾಯ ಇಲಾಖೆಯ ಮೇಲಿನ ಬೇಡಿಕೆಗಳು ಇಲ್ಲಿ ಚರ್ಚೆಗೆ ಬಂದಾಗ ಕೆಲವು ಮಾನ್ಯ ಸದಸ್ಯರು ರಾಜ್ಯದ ಯಾವುದೇ ಭಾಗದಲ್ಲಿ ಬರಗಾಲ ಬಂದರೆ ಅಲ್ಲಿ ಕೂಡಲೇ ಬರಗಾಲ ಪೀಡಿತ ಪ್ರದೇಶವೆಂದು ಸರ್ಕಾರ ಘೋಷಣೆ ಮಾಡದಿದ್ದರೆ ಅಲ್ಲಿ ಕೆಲವು ಕಾರ್ಯಕ್ರಮಗಳನ್ನು ಕೈಕೊಳ್ಳುವುದ ಕ್ಕಾಗುವುದಿಲ್ಲವೆಂದು ಹೇಳಿದರು. ನಿಮ್ಮ ಪಕ್ಷದ ಸದಸ್ಯರು ಸಹ ಇದೇ ಮಾತನ್ನು ಹೇಳಿದ್ದಾರೆ. ಬರ ಗಾಲ ಪೀಡಿತ ಪ್ರದೇಶಗಳೆಂದು ಸಾರಲು ನಿವಂಗೆ ಮನಸ್ಸಿದ್ದರೂ ಸಹ, ಅದಕ್ಕೆ ಸೂಕ್ತ ಕಾನೂನು ಇಲ್ಲ ಎಂದು ಹೇಳಿದ್ದೀರಿ. ನನ್ನ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಬರಗಾಲ ಇದೆ. ಆದರೆ ನೀವು ಅದನ್ನು ಡಿಕ್ಲೇರ್ ಮಾಡುವುದಿಲ್ಲ. ಇದರಿಂದ ಅಲ್ಲಿ ಕೆಲವು ಕಾರ್ಯಕ್ರಮಗಳನ್ನು ಜಾರಿಗೆ ತರಲು ಸಾಧ್ಯವಾಗುತ್ತಿಲ್ಲ. ನೀವು ಬೇರೆ ಬೇರೆ ಕಾನೂನುಗಳನ್ನು ಜಾರಿಗೆ ತರುತ್ತೀರಿ. ಆದರೆ ಇದಕ್ಕೆ ಸಂಬಂಧಪಟ್ಟಂತೆ ಏತಕ್ಕೆ ಒಂದು ಕಾನೂನು ಮಾಡಬಾರದು ? ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ ನೀವು ಏತಕ್ಕೆ ತಿದ್ದುಪಡಿ ಯನ್ನು ಇದಕ್ಕ ಸಂಬಂಧಪಟ್ಟಂತೆ ತರಲಿಲ್ಲ ? ಇದಕ್ಕೆ ಸಂಬಂಧಪಟ್ಟಂತೆ ನೀವು ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲವೆಂದು ಹೇಳುತ್ತೇನೆ. ಇವೊತ್ತು ಮಾನ್ಯ ಶಂಕರ್ ಅವರು ಆರಿಸಿ ಬಂದಿರುವ ಚಿಕ್ಕಮಗಳೂರು, ಹಾಗೂ ತರೀಕೆರೆ, ಬೀರೂರು, ಕಡೂರು ಮುಂತಾದ ಕಡೆಗಳಲ್ಲಿ ಸಹ ಇವೊತ್ತು ಬರಗಾಲ ಬಂದಿದೆ ಈ ಬಗ್ಗೆ ನೀವು ಡಿಕ್ಲೇರ್ ಮಾಡದಿದ್ದರೆ ಅಲ್ಲಿನ ಜನರಿಗೆ ಯಾವ ಅನುಕೂಲಗಳೂ ಸಿಗುವುದಿಲ್ಲ. ಈ ಬಗ್ಗೆ ಸೂಕ್ತ ಕಾನೂನನ್ನು ಮಾಡಲು ನೀವು ಹಿಂದೇಟು ಹಾಕಿದ್ದೀರಿ. ನೀವು ಕಾನೂನು ಇಲಾಖೆ ಜೊತೆ ಮಾತನಾಡಿ ಇದಕ್ಕೆ ಸಂಬಂಧಪಟ್ಟಂತೆ ಒಂದು ಕಾನೂನನ್ನು ಮಾಡುವುದು ಒಳ್ಳೆಯದು. ಇವೊತ್ತು ಬರಗಾಲ ಎಂಬುದು ಈ ರಾಜ್ಯದ ಅನೇಕ ಭಾಗಗಳಲ್ಲಿ ಬಂದಿದೆ. ಗೋಕಾಕ್, ಅಥಣಿ, ರಾಯಬಾಗ್, ಸೌದತ್ತಿ ಮುಂತಾದ ಅನೇಕ ಭಾಗಗಳಲ್ಲಿ ಬಂದಿದೆ. ಆದರೆ ತಾವು ಈ ಬಗ್ಗೆ ಡಿಕ್ಲೇರ್ ಮಾಡಿದ ಕಾರಣ ಅಲ್ಲಿನ ಅಧಿಕಾರಿಗಳು ತಮ್ಮ ಮನಸ್ಸಿಗೆ ಬಂದಂತೆ ಕೆಲಸ ಮಾಡುತ್ತಿದ್ದಾರೆ.

ಇನ್ನು ಈ ಬರಗಾಲದ ಪ್ರಯುಕ್ತ ಅನೇಕ ಜಾನುವಾರುಗಳು ಸತ್ತವು. ಕೆಲವು ಜಾನುವಾರುಗಳು ಕಟುಕರಿಗೆ ಮಾರಾಟವಾದವು. ಅನೇಕ ಜಾನುವಾರುಗಳನ್ನು ಗೋವಾ ಹಾಗೂ ಮಹಾರಾಷ್ಟ್ರಕ್ಕೆ ಸಾಗಿಸಲಾಯಿತು. ಈ ಎಲ್ಲಾ ಜಾನುವಾರುಗಳು ನಮ್ಮ ರಾಜ್ಯದಲ್ಲಿಯೇ ಉಳಿದಿದ್ದರೆ ನಿಮ್ಮಲ್ಲಿರುವಂತಹ ಮೇವು ಸಾಕಾಗುತ್ತಿರಲಿಲ್ಲ. ಮತ್ತೆ ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಿಂದ ತರಿಸಬೇಕಾಗುತ್ತಿತ್ತು. ಮುಖ್ಯವಾಗಿ ನಮ್ಮಲ್ಲಿರುವ ಜಾನುವಾರುಗಳನ್ನು ರಕ್ಷಣೆ ಮಾಡುವಲ್ಲಿ ಸರ್ಕಾರ ಯಾವ ರೀತಿ ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿತ್ತೋ, ಆ ರೀತಿ ಕಾರ್ಯಕ್ರಮ ಹಾಕಿಕೊಳ್ಳಲು ಸ್ಪಷ್ಟವಾಗಿ ವಿಫಲವಾಗಿದೆ ಎಂದು ನಾನು ಹೇಳಬಹುತ್ತೇನೆ. ಈ ಬಗ್ಗೆ ನಾನು ಹೆಚ್ಚಿನ ವಿವರಗಳಿಗೆ ಹೋಗುವುದಿಲ್ಲ. ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರ ಕೊಟ್ಟರೆ ಒಳ್ಳೆಯದು.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಮಾನ್ಯ ಆಸ್ಕರ್‌ಫರ್ನಾಂಡೀಸ್ ಅವರು ಕೇಂದ್ರದಿಂದ ಮತ್ತೆ ೧೩ ಕೋಟಿ ರೂಪಾಯಿಗಳು ಬಂದಿದೆ ಎಂದು ಹೇಳಿದ್ದಾರೆ. ಆದ್ದರಿಂದ ಆ ಹಣ ಬಂದಿದೆಯೋ ಅಥವಾ ಬರುವ ಹಾದಿಯಲ್ಲಿ ಇದೆಯೋ ಎಂಬುದನ್ನು ತಾವು ತಮ್ಮ ಉತ್ತರದಲ್ಲಿ ಹೇಳಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಬರಗಾಲ ಬಂದಿರುವ ಕಡೆಗಳಲ್ಲಿ ಫ್ಯಾಮಿನ್ ಎಂದು ಡಿಕ್ಲೇರ್ ಮಾಡಿಲ್ಲ ಎಂದು ಹೇಳಿದರು. ಈ ರೀತಿ ಡಿಕ್ಲೇರ್ ಮಾಡಿದರೆ ಅಲ್ಲಿನ ಜನರಿಗೆ ಕೆಲವು ಹಕ್ಕುಗಳು ಬರುತ್ತವೆ ಎಂದು ಹೇಳಿದರು. ಇದಕ್ಕೆ ಸಂಬಂಧಪಟ್ಟ ಫ್ಯಾಮಿನ್ ಕೋಡನ್ನು ಈ ಹಿಂದೆ ಮಾನ್ಯ ಹುಚ್ಚಮಾಸ್ತಿಗೌಡರು ಕಂದಾಯ ಮಂತ್ರಿಗಳಾಗಿದ್ದಾಗ ಮಾಡುತ್ತೇವೆಂದು ಹೇಳಿದರು. ಆದರೆ ಆಗ ಆಗಲಿಲ್ಲ. ಮತ್ತೆ ಶ್ರೀ ಮಲ್ಲಿಕಾರ್ಜುನ ಖಾರ್ಗೆ ಅವರು ರೆವಿನ್ಯೂ

ಮಂತ್ರಿಗಳಾಗಿದ್ದಾಗ ಸಹ ಇದೇ ಮಾತನ್ನು ಹೇಳಿದರು. ಆದರೆ ಅವರ ಕಾಲದಲ್ಲಿ ಸಹ ಇದು ಆಗಲಿಲ್ಲ. ಈಗ ನಾವು ಇದನ್ನು ಅದಷ್ಟೂ ಜಾಗ್ರತೆ ಮಾಡುತ್ತೇವೆ. ಆಲ್ಲಿ ಒಂದು ವಿಚಾರ ಬರುತ್ತದೆ, ಅದೇನೆಂದರೆ ಕಂದಾಯ ಮಂತ್ರಿಗಳ ಸಭೆಯಲ್ಲಿ ಈ ವಿಚಾರ ಚರ್ಚೆಗೆ ಬಂದಾಗ ಕೆಲವು ರಾಜ್ಯಗಳಲ್ಲಿ ಇದನ್ನು ಮಾಡು ವಂತಹ ಆಗತ್ಯವಿಲ್ಲ ಎಂದು ತಿಳಿದು ಬಂತು. ಬಹಳ ಹಿಂದಿನ ಕಾಲದಲ್ಲಿ ಮಾಡಿದಂಥ ಫ್ಯಾಮಿನ್ ಕೋಡ್ ಇದೆ ಇದರ ಪ್ರಕಾರ ಏನಾದರೂ ಡಿಕ್ಲೇರ್ ಮಾಡಿದರೆ ಆ ಭಾಗದ ಜನರಿಗೆ ಕೆಲಸ ಒದಗಿಸ ಬೇಕಾಗುತ್ತದೆ, ಕೂಡಿಯಂಥ ನೀರನ್ನು ಒದಗಿಸಬೇಕಾಗುತ್ತದೆ, ಬಟ್ಟೆಗಳನ್ನು ಹಂಚಬೇಕಾಗುತ್ತದೆ, ಗಂಜಿ ಕೇಂದ್ರಗಳನ್ನು ತೆರೆಯಬೇಕಾಗಂತ್ತದೆ ಆದರೆ ಈಗ ಕಾಲ ಬದಲಾವಣೆ ಆಗಿದೆ. ಕುಡಿಯುವ ನೀರನ್ನು ಒದಗಿಸಲು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅನೇಕ ಜನರಿಗೆ ಉದ್ಯೋಗವನ್ನು ಕೊಡುತ್ತಿದ್ದೇವೆ. ವೃದ್ಧಾಪ್ಯ ವೇತನ ಕೊಡುತ್ತಿದ್ದೇವೆ. ಹೀಗೆ ನಾನಾ ರೀತಿಯ ಅನುಕೂಲಗಳು ಈಗ ಬಂದಿವೆ. ಈ ಹಿಂದೆ ಇಂತಹ ಅನುಕೂಲಗಳು ಇರಲಿಲ್ಲ. ಆದ್ದರಿಂದ ನಾವು ಹೊಸದಾಗಿ ಫ್ಯಾಮಿನ್ ಕೋಡ್ ಮಾಡುವುದಾದರೆ ಈಗಿನ ಕಾಲಕ್ಕೆ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕಾಗು ತ್ತದೆ. ಇದನ್ನು ಅದಷ್ಟು ಜಾಗ್ರತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಇನ್ನು ಮಾನ್ಯ ದೊಡ್ಡಮೇಟಿ ಅವರು ಶ್ರೀ ಆಸ್ಕರ್ ಫರ್ನಾಂಡೀಸ್ ಅವರ ಹೇಳಿಕೆ ಬಗ್ಗೆ ಪ್ರಸ್ತಾಪ ಮಾಡಿದರು. ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದಾರೆ ಮತ್ತು ಲೋಕಸಭಾ ಸದಸ್ಯರು ಸಹ ಆಗಿದ್ದಾರೆ. ಇವರು ಅವರನ್ನು ಭೇಟಿ ಆದಾಗ ಈ ಮಾತನ್ನು ಹೇಳಿದರೋ ಏನೋ ನನಗೆ ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಈ ಬಗ್ಗೆ ಪತ್ರಿಕೆಯಲ್ಲಿ ಏನು ವರದಿ ಆಗಿದೆ ಎಂದರೆ, ಇನ್ನೂ ೧೩ ಕೋಟಿ ರೂಪಾಯಿಗಳು ಬಿಡುಗಡೆ ಆಗಬೇಕಾಗಿದೆ ಎಂದು ಅವರು ಹೇಳಿದ್ದಾರೆಂದು ವರದಿ ಆಗಿದೆ.

ಶ್ರೀ ಜಿ. ನಾರಾಯಣಕುಮಾರ್.—ಬಿಡುಗಡೆ ಆಗಿದೆ ಎಂದು ಅವರು ಹೇಳಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಇದುವರೆಗೆ ನಮಗೆ ಕೇಂದ್ರಸರ್ಕಾರದಿಂದ ಯಾವ ಇನ್‌ಫರ್‌ಮೇಷನ್ ಸಹ ಬಂದಿಲ್ಲ. ಒಂದು ತಿಂಗಳ ಹಿಂದೆ ಶ್ರೀ ಡಿ. ಕೆ. ನಾಯಕರ್ ಅವರು ೧೪ ಕೋಟಿ ರೂಪಾಯಿಗಳು ಬಿಡುಗಡೆ ಆಗಿದೆ ಎಂದು ಹೇಳಿದ ಮೇಲೆ ನಾನು ದೆಹಲಿಯಲ್ಲಿರುವಾಗ ನಮ್ಮ ರಾಜ್ಯದ ಅಧಿಕಾರಿಗಳಿಗೆ ಫೋನ್ ಮಾಡಿ ಕೇಳಿದೆ. ಆದರೆ ಅದೂ ಸಹ ಸರಿಯಿಲ್ಲ ಎಂದು ತಿಳಿಯಿತು. ಹಣ ಜಾಗ್ರತೆ ಬಿಡುಗಡೆ ಮಾಡುವಂತೆ ನಾವು ಡಿಸೆಂಬರ್ ೧೨ ರಂದೇ ಒಂದು ಮೆಮೊರ್ಯಾಂಡವಮನ್ನು ಕೇಂದ್ರಕ್ಕೆ ಕೊಟ್ಟಿದ್ದೇವೆ, ಆಗನ್ನು ಕೊಟ್ಟು ೩ ತಿಂಗಳ ಮೇಲಾಯಿತು. ಇನ್ನೂ ಹಣ ಬಿಡುಗಡೆ ಆಗಲಿಲ್ಲ. ಪ್ಲಾನಿಂಗ್ ಕಮಿಷನ್ ಮತ್ತು ಫೈನಾನ್ಸ್ ಕಮಿಷನರ್‌ರಿಪೋರ್ಟ್ ಪ್ರಕಾರ ನಾವು ಮೆಮೊ ರ್ಯಾಂಡಮ್ ಕೊಟ್ಟ ೧೫ ದಿವಸಗಳಲ್ಲಿ ಕೇಂದ್ರದ ಟೀಮು ಇಲ್ಲಿಗೆ ಬಂದು ನೋಡಿ ವರದಿ ಕೊಡಬೇಕು. ಈ ಹಿಂದೆ ನಾವು ಮೆಮೊರ್ಯಾಡಂಮ್ ಕೊಟ್ಟ ಒಂದು ವಾರದಲ್ಲಿಯೇ ಕೇಂದ್ರದ ಟೀಮು ಬಂತು. ನಂತರ ಅವರ ವರದಿ ಆಧಾರದ ಮೇಲೆ ಕೂಡಲೇ ಹಣವನ್ನು ಸಹ ಬಿಡುಗಡೆ ಮಾಡಿದರು. ಆದರೆ ಮೊನ್ನೆ ಕೇಂದ್ರದ ಟೀಮು ಬಂದು ಹೋದ ಮೇಲೆ ಅವರು ವರದಿ ಕೊಟ್ಟಿದ್ದಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಇದರೆ ಅವರು ಹಣವನ್ನು ಇನ್ನೂ ಬಿಡುಗಡೆ ಮಾಡಿಲ್ಲ ಕೇಂದ್ರದ ಕೃಷಿ ಮಂತ್ರಿಗಳು ಹಣ ಬಿಡುಗಡೆ ಮಾಡುವ ಬಗ್ಗೆ ಶಿಫಾರಸ್ ಮಾಡುತ್ತೇವೆಂದು ಲೋಕ ಸಭೆಯಲ್ಲಿ ಹೇಳಿದ್ದಾರೆ. ಆದರೆ ಇನ್ನೂ ಹಣ ಬಿಡುಗಡೆ ಆಗಿಲ್ಲ. ರಾಜ್ಯಸರ್ಕಾರ ತನ್ನ ಹಣಕಾಸಿನ ಒಂದು ಇತಿಮಿತಿಯಲ್ಲಿಯೇ ೮೦ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಬಿಡುಗಡೆ ಮಾಡಿದೆ. ಇದು ಎಲ್ಲರಿಗೂ ಗೊತ್ತಿಲ್ಲ. ಎನ್. ಆರ್. ಇ. ಕೆಳಗೆ ತೆಗೆದುಕೊಳ್ಳುವ ಕೆಲಸಕ್ಕೆ ಕೇಂದ್ರದಿಂದ ೫೦ ಪರ್ಸೆಂಟ್ ಸಬ್ಸಿಡಿ ಸಿಗುತ್ತದೆ. ಅದು ಬೇರೆ. ಆದರೆ ಈಗ ನಾವು ಕೇಳಿರುವ ಹಣ ಇನ್ನೂ ಬಂದಿಲ್ಲ. ಜಾಗ್ರತೆ ಬಿಡುಗಡೆ ಮಾಡ ಬೇಕೆಂದು ಈಗಲೂ ತಮ್ಮ ಮೂಲಕ ಕೇಂದ್ರಕ್ಕೆ ಒತ್ತಾಯ ಮಾಡುತ್ತೇನೆ. ಕೇಂದ್ರದಿಂದ ಹಣ ಬರ ದಿದ್ದರೆ ನಮ್ಮ ಹಣವನ್ನೇ ಖರ್ಚು ಮಾಡಬೇಕಾಗುತ್ತದೆ. ಆಗ ನಮ್ಮ ಯೋಜನೆಗಳ ಕೆಲಸಗಳು ಕುಂಠಿತಗೊಳ್ಳುತ್ತವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೇವಲ ಬರಗಾಲದ ಕೆಲಸಕ್ಕಾಗಿಯೇ ೮೦ ಕೋಟಿ ರೂಪಾ ಯಿಗಳನ್ನು ಬಿಡುಗಡೆ ಮಾಡಿದ್ದೀರಾ ?

ಶ್ರೀ ಎಸ್ ಆರ್. ಬೊಮ್ಮಾಯಿ.—ಹೌದು.